ಕರ್ನಾಟಕದ ಶಾಸನಸಂಪತ್ತು ಶ್ರೀಮಂತವಾದುದು. ಅಶೋಕನ ಕಾಲದಿಂದ ಹಿಡಿದು ಈ ವರೆಗೆ ಹುಟ್ಟಿದ ಸುಮಾರು ೨೫೦೦೦ ಶಾಸನಗಳು ನಮ್ಮ ಆಸ್ತಿ. ಮೌರ್ಯ, ಸಾತವಾಹನ, ಕದಂಬ, ಬಾದಾಮಿಚಾಲುಕ್ಯ, ಗಂಗ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ ಮೊದಲಾದ ಸಾರ್ವಭೌಮರ, ಸಾಮಂತರ ಅವಧಿಯಲ್ಲಿ ಹುಟ್ಟಿದ ಇವು, ಕನ್ನಡ ಜನಾಂಗದ ಬದುಕಿನ ವಿಶ್ವಕೋಶಗಳು. ಕರ್ನಾಟಕದ ಒಳಹೊರಗೆ ಹಂಚಿಹೋದ ಇವುಗಳ ಪರಿವೀಕ್ಷಣೆ-ಪ್ರಕಟಣೆ ಸುಮಾರು ೧೦೦ ವರ್ಷಗಳಿಂದ ನಮ್ಮಲ್ಲಿ ನಡೆಯುತ್ತಲಿದೆ. ಬಿ. ಎಲ್. ರೈಸ್, ಆರ್. ನರಸಿಂಹಾಚಾರ್ ಮೊದಲಾದ ವಿದ್ವಾಂಸರಿಂದ ದಕ್ಷಿಣ ಕರ್ನಾಟಕದಲ್ಲಿ ಶಾಸನಗಳ ಮೊದಲ ಸುತ್ತಿನ ಪರಿವೀಕ್ಷಣೆ ನಡೆದು 'ಎಪಿಗ್ರಾಫಿಯ ಕರ್ನಾಟಿಕ ಮಾಲೆ'ಯ ಮೂಲಕ ಪ್ರಕಟವಾಗಿ, ಎರಡನೆಯ ಸುತ್ತಿನ ಅನ್ವೇಷಣೆ ನಡೆದು Supplement ಗಳ ಮೂಲಕ ಪ್ರಕಟವಾಗಿ ಈಗ ಮೂರನೆಯ ಸುತ್ತಿನ ಪರಿವೀಕ್ಷಣೆ-ಪ್ರಕಟಣೆ ನಡೆಯುತ್ತಲಿದೆ. ಇಂಥ ಪುಣ್ಯ, ಉತ್ತರಕರ್ನಾಟಕಕ್ಕೆ ಲಭಿಸಲಿಲ್ಲ; ಹೊರನಾಡಿನ ಶಾಸನಗಳಂತೂ ಪರದೇಶಿಯಾಗಿ ಬಿದ್ದಿವೆ. ಶಾಸನ ಕ್ಷೇತ್ರದ ಪಿತಾಮಹರಾದ ಫ್ಲೀಟರು, ಕರ್ನಾಟಾಂತರ್ಗತ ಭಾರತವನ್ನೂ ಕರ್ಯಕ್ಷೇತ್ರವನ್ನಾಗಿರಿಸಿಕೊಂಡು, ಶಾಸನೇತರ ಶಾಖೆಗಳನ್ನೂ ನಿಲುಕಿಸಿಕೊಂಡ ಕಾರಣ ಉತ್ತಕರ್ನಾಟಕದ ಬಹುಪಾಲು ಶಾಸನಕ್ಷೇತ್ರ ಅವರ ವಿದ್ವತ್ತಿಗೆ ಎರವಾಯಿತು. ಏನು ಕಾರಣವೋ ಶಾಸನಾನ್ವೇಷಣೆಗಾಗಿಯೆ ಅಸ್ತಿತ್ವಕ್ಕೆ ಬಂದ ಇಲಾಖೆಗಳ ಮತ್ತು ಸಂಸ್ಥೆಗಳ ಮೂಲಕ ಈ ಕಾರ್ಯ ಕೂರ್ಮಗತಿಯಲ್ಲಿ ನಡೆದು, ಬಹಳಸಲ ಅನವಶ್ಯಕ ಪುನರುಕ್ತತೆ ತಲೆದೋರಿ ಅಪೂರ್ಣತೆಯಲ್ಲಿಯೇ ಒಂದು ಬಗೆಯ ಅವ್ಯವಸ್ಥೆ ಬೆಳೆದುನಿಂತಿತು. ಮೊದಲಿನಿಂದಲೂ ಈ ಕ್ಷೇತ್ರವನ್ನು ಕೈಯಲ್ಲಿಟ್ಟುಕೊಂಡ ಹತ್ತಾರು ಜನರನ್ನು ಬಿಟ್ಟರೆ ಮಿಕ್ಕವರಿಗೆ ಇದು ದಿಕ್ಕು ತಪ್ಪಿಸುವ ಗೊಂದಲಪುರವಾಗಿ ಪರಿಣಮಿಸಿತು. ಹೊಸ ಶಾಸನಗಳ ಅನ್ವೇಷಣೆಯಷ್ಟೇ ಅವಶ್ಯವಾದುದು ಅನ್ವೇಷಿತ ಶಾಸನಗಳ ಈ ಅವ್ಯವಸ್ಥೆಯ ಅಭ್ಯಾಸ. ಇದರಿಂದ ಈ ವರೆಗೆ ನಡೆದ ಶಾಸನ ಪರಿವೀಕ್ಷಣೆಯ ಒಂದು ಸ್ಪಷ್ಟ ಚಿತ್ರ ಮೂಡುವುದರ ಜೊತೆ, ಇನ್ನು ಮುಂದೆ ಮಾಡಬೇಕಾದುದೆಷ್ಟಿದೆ ಎಂಬ ಅಂಶವೂ ಅನುಭವಕ್ಕೆ ಬರುತ್ತದೆ. ಈ ದೃಷ್ಟಿಯಿಂದ ಕೈಗೆತ್ತಿಕೊಂಡ 'ಶಾಸನಸೂಚಿ ಯೋಜನೆ'ಯ ಪ್ರಥಮ ಸಂಪುಟವಾಗಿ ಪ್ರಕಟವಾಗುತ್ತಲಿದೆ, "ಧಾರವಾಡ ಜಿಲ್ಲೆಯ ಶಾಸನಸೂಚಿ'.

ಯೋಜನೆಯ ಜಟಿಲತೆ

ಈ ಕಾರ್ಯ ಭಾವಿಸಿದಷ್ಟು ಸುಲಭವಿಲ್ಲ. ದಕ್ಷಿಣ ಕರ್ನಾಟಕದಲ್ಲಾದರೆ ಒಂದು ಜಿಲ್ಲೆಯ ಶಾಸನಗಳು ಚೊಕ್ಕಟವಾಗಿ ಒಂದು ಸಂಪುಟದಲ್ಲಿ ಅಚ್ಚಾಗಿವೆ. ಆಮೇಲೆ ಗಮನಕ್ಕೆ ಬಂದುವು

---

* ಇತ್ತೀಚೆ ಡಾ. ಎಸ್. ಶೆಟ್ಟರ್ ಅವರು ಮೈಸೂರು ಪ್ರದೇಶದ ಅಪ್ರಕಟಿತ ಶಾಸನಗಳ ಸೂಚಿಯನ್ನು 'ಕರ್ನಾಟಕ ಭಾರತಿ'ಯ (೭-೧ ಇತ್ಯಾದಿ) ಮೂಲಕ ಪ್ರಕಟಿಸುತ್ತಲಿದ್ದಾರೆ.

Supplements ಮತ್ತು MAR ಸಂಪುಟಗಳಲ್ಲಿ ಪ್ರಕಟವಾಗಿವೆ. ಈ ಮೂರನ್ನು ಕಣ್ಣೆದುರು ಇಟ್ಟುಕೊಂಡು ಕುಳಿತರೆ ಸಾಕು, ಅಲ್ಲಿಯ ಶಾಸನಗಳ ಸೂಚಿ ಸಿದ್ಧವಾಗಿಬಿಡುತ್ತದೆ. ಉತ್ತರಕರ್ನಾಟಕದ ಶಾಸನಗಳ ಸೂಚಿ ರಚನೆ ಹೀಗಲ್ಲ. ಮುಂಬೈ, ನಿಜಾಂ, ಮದ್ರಾಸ ರಾಜ್ಯಗಳಲ್ಲಿ ಹಂಚಿಹೋದ ಈ ಪ್ರದೇಶದ ಶಾಸನ ಸಂಗ್ರಹಕಾರ್ಯ ಮೊದಲಿನಿಂದಲೂ ಮಲಮಗನಂತೆ ಅಲಕ್ಷ್ಯಕ್ಕೆ ಗುರಿಯಾಯಿತು.

ಸರಕಾರ, ಸಂಸ್ಥೆ, ವ್ಯಕ್ತಿಗಳು ಈ ಕಾರ್ಯವನ್ನು ಕೈಗೊಂಡರೂ ಅವರವರ ವಿಭಿನ್ನ ಧೋರಣೆಗಳಿಂದಾಗಿ ಸಂಪುಟಗಳಲ್ಲಿ ಪರಸ್ಪರ ಒಪ್ಪಂದವಾಗಲೀ, ಒಮ್ಮತವಾಗಲೀ ಸಾಧ್ಯವಾಗಲಿಲ್ಲ. ಸಾಲದುದಕ್ಕೆ ಪತ್ರಿಕೆಗಳಲ್ಲಿಯೂ ಅಲ್ಲೊಂದು ಇಲ್ಲೊಂದು ಶಾಸನಗಳು ಬೆಳಕುಕಂಡವು. ಉದಾ: ಒಂದು ಊರಿನ ಒಂದು ಶಾಸನ ಯಾವುದೋ ಪತ್ರಿಕೆಯಲ್ಲಿ, ಇನ್ನೊಂದು ಶಾಸನ ಯಾವುದೋ ಸಂಪುಟದಲ್ಲಿ, ಬೇರೊಂದು ಶಾಸನ, ಪತ್ರಿಕೆ ಮತ್ತು ಸಂಪುಟಗಳಲ್ಲಿ ಅಥವಾ ಎರಡು ಪತ್ರಿಕೆಗಳಲ್ಲಿಯೋ ಎರಡು ಸಂಪುಟಗಳಲ್ಲಿಯೋ ಪ್ರಕಟವಾದವು. ಕೆಲವು ಅಪ್ರಕಟಿತ ಸ್ಥಿತಿಯಲ್ಲಿ ಉಳಿದವು. ಒಂದು ಊರಿನ ಶಾಸನಗಳ ಸ್ಥಿತಿಯೇ ಹೀಗಾದಾಗ ಒಂದು ತಾಲೂಕಿನ, ಒಂದು ಜಿಲ್ಲೆಯ ಶಾಸನಗಳು ಸ್ಥಿತಿಯನ್ನು ಊಹಿಸಿಕೊಳ್ಳಬಹುದು. ಇದರಿಂದ ಮಾಡಿದ್ದೇ ಮಾಡಿದ ಪುನರುಕ್ತತೆ, ಚಲ್ಲಾಪಿಲ್ಲಿಯಾದ ಪ್ರಕಟಣೆಗಳಿಗೆ ಶಾಸನಗಳು ಗುರಿಯಾದವು.

ಪ್ರಾಚೀನತೆಯ ಅಭ್ಯಾಸಕ್ಕೆ ಅವಶ್ಯವಿರುವ ಗ್ರಂಥ, ಸಂಪುಟ, ವರದಿ, ಸೂಚಿ ಪತ್ರಿಕೆಗಳಿಂದ ಸುಸಜ್ಜಿತವಾದ ಒಂದೂ ಗ್ರಂಥಭಂಡಾರ ಕರ್ನಾಟಕದಲ್ಲಿಲ್ಲ. ಅಲ್ಲಿಷ್ಟು ಇಲ್ಲಿಷ್ಟು ಇದ್ದರೂ ಈ ಸಾಹಿತ್ಯ ಜೀರ್ಣರೂಪ, ಲುಪ್ತಪುಟ ಸ್ಥಿತಿಯಲ್ಲಿ ಸಿಗುತ್ತದೆ. ಹೀಗಾಗಿ ಊರೂರು ಅಲೆದು ಇನ್ನೊಮ್ಮೆ ಆ ಶಾಸನಗಳನ್ನು ಸಂಗ್ರಹಿಸುವುದಕ್ಕಿಂತ ಕಷ್ಟಕರವಾಗಿದೆ. ಈ ಸಂಪುಟ ಮತ್ತು ಪತ್ರಿಕೆಗಳನ್ನು ಹುಡುಕಲು ಗ್ರಂಥಭಾಂಡಾರಗಳಿಗೆ ಅಲೆಯುವುದು.

ಹೀಗೆ ಸಂಪುಟ, ಪತ್ರಿಕೆಗಳು ಸಿಗದಿರುವುದು, ಸಿಕ್ಕರೂ ಜೀರ್ಣಸ್ಥಿತಿಯಲ್ಲಿ ಸಿಗುವುದು, ಯಾವುದೇ ಶಾಸನ ಎಲ್ಲಿ ಪ್ರಕಟವಾಗಿದೆಯಂದು ಪತ್ತೆ ಹಚ್ಚುವುದು, ಅದರ ಪುನರುಕ್ತಗಳನ್ನು ಗುರುತಿಸುವುದು–ಈ ಎಲ್ಲ ತೊಂದರೆಗಳ ಮಧ್ಯದಲ್ಲಿ ಸಹನೆಯನ್ನು ಕಳೆದುಕೊಳ್ಳದಿದ್ದರೆ ಮಾತ್ರ ಈ ಕಾರ್ಯ ಸಾಧ್ಯವಾಗುತ್ತದೆ, ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಒಂದು ಅವ್ಯವಸ್ಥೆಯನ್ನು ಬಿಡಿಸಲು ಹೋಗಿ ಇನ್ನೊಂದು ಅವ್ಯವಸ್ಥೆಯನ್ನು ನಿರ್ಮಿಸಿದಂತಾಗುತ್ತದೆ. ಈ ತಿಳುವಳಿಕೆಯ ಹಿನ್ನೆಲೆಯಲ್ಲಿ ಹುಟ್ಟಿದೆ "ಧಾರವಾಡ ಜಿಲ್ಲೆಯ ಶಾಸನಸೂಚಿ."

ಧಾರವಾಡ ಜಿಲ್ಲೆಯ ಶಾಸನಸೂಚಿ :

'ಕನ್ನಡದ ತಿರುಳ್' ಎನಿಸಿದ ಧಾರವಾಡ ಜಿಲ್ಲೆ, ಪ್ರಾಚೀನಕಾಲದಿಂದಲೂ ರಾಜಕೀಯ, ಸಾಹಿತ್ಯಿಕ, ಧಾರ್ಮಿಕ ಚಟುವಟಿಕೆಗಳ ಕೇಂದ್ರಭೂಮಿ ಎಂದು ಪ್ರಸಿದ್ಧಿ ಪಡೆದಿದೆ. ಪುಲಿಗೆರೆ–೩೦೦, ಬೆಳ್ವೊಲ–೩೦೦ ಬಹುಭಾಗವನ್ನೂ ಬನವಸೆ–೧೨೦೦೦, ಹಲಸಿಗೆ–೧೨೦೦೦, ಕೂಂಡಿ–೩೦೦೦ ಗಳ ಅಲ್ಪ ಭಾಗವನ್ನೂ ಒಳಗೊಂಡ ಈ ಜಿಲ್ಲೆಯಲ್ಲಿ ಕಣ್ಣುತೆರೆದ ಶಾಸನಗಳ ಸಂಖ್ಯೆ ಅಧಿಕ. ಈಗ ನಮ್ಮ ದೃಷ್ಟಿಗೆ ಬಂದ ಅವುಗಳ ವಿವರ ಹೀಗಿದೆ :

ತಾಲೂಕು		ಗ್ರಾಮಗಳ ಸಂಖ್ಯೆ	ಶಾಸನವಿರುವ ಗ್ರಾಮಗಳ ಸಂಖ್ಯೆ	ತಾಲೂಕಿನ ಒಟ್ಟು ಶಾಸನಗಳು	ತಾಲೂಕಿನ ಪ್ರಕಟಿತ ಶಾಸನಗಳು	ತಾಲೂಕಿನ ಅಪ್ರಕಟಿತ ಶಾಸನಗಳು
೧.	ಧಾರವಾಡ	೧೬೩	೨೮	೬೬	೪೯	೧೭
೨.	ಹುಬ್ಬಳ್ಳಿ	೮೪	೩೧	೧೦೪	೯+೫*	೯೦
೩.	ಗದಗ	೬೧	೩೨	೨೨೦	೧೮೫+೨೪+೪*	೧೧
೪.	ರೋಣ	೯೪	೩೦	೧೦೯	೧೦೫	೪
೫.	ನವಲಗುಂದ	೫೯	೨೩	೭೩	೬೦+೧	೧೨
೬.	ನರಗುಂದ	೩೯	೮	೧೮	೧೦+೮	–
೭.	ಕಲಘಟಗಿ	೧೨೭	೩೦	೭೧	೩	೬೮
೮.	ಸಿಗ್ಗಾಂವ	೧೬೨	೬೧	೧೮೯	೧೯+೧೫	೧೫೫
೯.	ಕುಂದಗೋಳ	೫೯	೧೫	೬೧	೪೫	೧೬
೧೦.	ಸಿರಹಟ್ಟಿ	೯೨	೧೬	೯೨	೫೫	೩೭
೧೧.	ಮುಂಡರಗಿ	೫೩	೨೦	೫೯	೫೨	೭
೧೨.	ಹಾವೇರಿ	೧೨೫	೪೩	೨೦೪	**+೧೭೨	೧೨
೧೩.	ಬ್ಯಾಡಗಿ	೬೮	೩೩	೧೧೭	೧೬+೪೦*	೬೧
೧೪.	ರಾಣೆಬೆನ್ನೂರ	೧೧೨	೪೧	೧೧೩	೨೧+೮೮	೪
೧೫.	ಹಾನಗಲ್ಲ	೧೭೩	೬೪	೩೫೦	೮೬	೨೬೪
೧೬.	ಹಿರೇಕೆರೂರ	೧೪೪	೭೧	೨೯೩	೧೦೪	೧೮೯
		೧೬೧೫	೫೪೬	೨೧೩೯	೧೧೯೬	೯೪೭

ಈ ಜಿಲ್ಲೆಯ ಒಟ್ಟು ೧೬೧೫ ಗ್ರಾಮಗಳಲ್ಲಿ ಈಗ ತಿಳಿದ ಮಟ್ಟಿಗೆ ಶಾಸನಗಳಿದ್ದುದು ೫೪೬ ಗ್ರಾಮಗಳಲ್ಲಿ; ಈ ಗ್ರಾಮಗಳಲ್ಲಿಯ ಒಟ್ಟು ಶಾಸನ ಸಂಖ್ಯೆ ೨೧೩೯; ಇವುಗಳಲ್ಲಿ ಪ್ರಕಟವಾದವು ೧೧೯೬; ಪ್ರಕಟವಾಗಬೇಕಾದುವು ೯೪೭. ಮೇಲಿನ ಪಟ್ಟಿಯಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಒಂದು: ನರಗುಂದ ಮೊದಲಾದ ತಾಲೂಕುಗಳಲ್ಲಿ ಪರಿವೀಕ್ಷಣೆ ತೀರ ಅಲಕ್ಷಿತವಾಗಿದೆ. ಎರಡು: ಪರಿವೀಕ್ಷಣೆಗೊಂಡಿದ್ದರೂ ಹುಬ್ಬಳ್ಳಿ, ಕಲಘಟಗಿ, ಸಿಗ್ಗಾಂವ, ಸಿರಹಟ್ಟಿ, ಬ್ಯಾಡಗಿ, ಹಾನಗಲ್ಲ,

---

* ಮೊದಲ ಅಧಿಕ ಚಿಹ್ನೆಯ ಮುಂದಿನ ಸಂಖ್ಯೆ SII XVIIIದಲ್ಲಿ ಪ್ರಕಟವಾಗಲಿರುವ ಶಾಸನಗಳನ್ನು, ಎರಡನೆಯ ಅಧಿಕ ಚಿಹ್ನೆಯ ಮುಂದಿನ ಸಂಖ್ಯೆ SII XVIII ದಲ್ಲಿ ಪ್ರಕಟವಾಗಲಿರುವ ಹೊಸ ಶಾಸನಗಳನ್ನು ಸೂಚಿಸುತ್ತವೆ. ಅನುಬಂಧ ನೋಡಿರಿ.

** ಸೂಚಿಯಲ್ಲಿ ರಾಣೆಬೆನ್ನೂರ ತಾಲೂಕಿನ ಶಾಸನಗಳ ಸಂಖ್ಯೆ ೧೦೩ ಎಂದು ನಮೂದಿತವಾಗಿದೆ. ಆದರೆ ನಂ. ೫೪ರ ಮುಂದಿನ ಕ್ರಮಸಂಖ್ಯೆ ತಪ್ಪಿದ ಕಾರಣ ಈ ತಾಲೂಕಿನ ಒಟ್ಟು ಶಾಸನ ಸಂಖ್ಯೆ ೧೧೩ ಎಂದು ಭಾವಿಸಬೇಕು.

ಹಿರೇಕೆರೂರ ಈ ತಾಲೂಕುಗಳ ಶಾಸನಗಳಲ್ಲಿ ಬಹುಪಾಲು ಪ್ರಕಟವಾಗಿಲ್ಲ. ಈ ಎರಡು ಕಾರ್ಯಗಳು ನಡೆದಲ್ಲಿ ಧಾರವಾಡ ಜಿಲ್ಲೆಯ, ತನ್ಮೂಲಕ ಕರ್ನಾಟಕದ ಇತಿಹಾಸ-ಸಾಹಿತ್ಯಗಳ ಮೇಲೆ ಹೆಚ್ಚಿನ ಬೆಳಕುಬೀಳುವ ಸಂಭವವಿದೆ.

ಈ ಸೂಚಿಯಲ್ಲಿ ಹೆಜ್ಜೆಹೆಜ್ಜೆಗೂ ಕಂಡುಬರುವ 'ತ್ರುಟಿತ, ಅತಿತ್ರುಟಿತ, ಅಸ್ಪಷ್ಟ' ಎಂಬ ಪದಗಳು ಧಾರವಾಡ ಜಿಲ್ಲೆಯ ಶಾಸನಗಳ ದುಸ್ಥಿತಿಯುನ್ನು ಎತ್ತಿ ಹೇಳುತ್ತವೆ. ಹೀಗೆ ಬಹುಪಾಲು ಶಾಸನಗಳು ನಾಶವಾಗಿದ್ದರೂ ಈಗ ಸಿಕ್ಕಿರುವ ಶಾಸನಗಳು ಒದಗಿಸುವ ಮಾಹಿತಿ ಅಲ್ಪವೇನಲ್ಲ. ಗದಗ, ಮುಳಗುಂದ, ಲಕ್ಕುಂಡಿ, ಸೂಡಿ, ಅಣ್ಣಿಗೇರಿ, ತಂಬೂರ, ಬಂಕಾಪುರ, ಲಕ್ಷ್ಮೇಶ್ವರ, ದೇವಗಿರಿ, ಹಾವೇರಿ, ಕಲಕೇರಿ ಗ್ರಾಮಗಳಲ್ಲಿ ವಿಪುಲವಾಗಿರುವ ಶಸನಸಂಖ್ಯೆ ಅವುಗಳ ಪ್ರಾಚೀನ ಮಹತ್ವವನ್ನು ತಿಳಿಸುತ್ತದೆ. ದಾನ ಮತ್ತು ವೀರಶಾಸನಗಳಲ್ಲದೆ ಸಲ್ಲೇಖನ, ಸಹಗಮನ ಶಿಲೆಗಳು ಇಲ್ಲಿ ಕಾಲೂರಿ ನಿಂತಿವೆ. ಕಾಲಕಾಲಕ್ಕೆ ನಡೆದ ರಾಜಕೀಯ, ಸಾಮಾಜಿಕ, ಧಾರ್ಮಿಕ ಘಟನೆಗಳ ಶ್ರೀಮಂತಚಿತ್ರ ಈ ಶಾಸನಗಳಲ್ಲಿ ಎದ್ದುಬರುತ್ತಿದೆ. ಅತ್ತಿಮಬ್ಬೆ, ಶಂಕರಗಂಡ, ಬಸವಣ್ಣ, ಸಿದ್ಧರಾಮ, ಏಕಾಂತದ ರಾಮಯ್ಯ, ಕುಮಾರರಾಮ, ಕುಮಾರವ್ಯಾಸ ಮೊದಲಾದವರನ್ನು ಕುರಿತ ಶಾಸನಗಳು ಈ ಜಿಲ್ಲೆಯ ಮಹತ್ವಪೂರ್ಣ ಪ್ರಾಚೀನ ದಾಖಲೆಗಳಾಗಿವೆ. ಒಟ್ಟಿನಲ್ಲಿ ಕರ್ನಾಟಕದ ಒಟ್ಟು ಶಾಸನಗಳ ಹತ್ತರಲ್ಲಿ ಒಂದುಪಾಲು ಶಾಸನಗಳು ಧಾರವಾಡ ಜಿಲ್ಲೆಯಲ್ಲಿವೆ.

ಸೂಚಿ ಸ್ವರೂಪ:

ಈ ಸೂಚಿ, ಧಾರವಾಡ ಜಿಲ್ಲೆಯನ್ನು ತಾಲೂಕ ಘಟಕಗಳಲ್ಲಿ ವರ್ಗೀಕರಿಸಿಕೊಂಡಿದೆ. ಪ್ರತಿಯೊಂದು ತಾಲೂಕಿನ ಶಾಸನಗಳನ್ನು ಇಲ್ಲಿ ಗ್ರಾ ನಂ, ಗ್ರಾಮದ ಹೆಸರು, ವರದಿ-ವರ್ಷ, ನಂ, ದೊರೆತಸ್ಥಳ, ಅರಸ, ಮಿತಿ, ಪ್ರಕಟನೆ ಇಷ್ಟು ವಿವರಗಳಿಂದ ಹೀಗೆ ಪರಿಚಯಿಸಲಾಗಿದೆ.

೧. ಗ್ರಾ ನಂ: ಪ್ರತಿಯೊಂದು ತಾಲೂಕಿನ ಶಾಸನಸ್ಥ ಗ್ರಾಮಗಳಿಗೆ ಒಂದರಿಂದ ನಿರಂತರವಾಗಿ ನಂಬರುಗಳನ್ನು ಕೊಡಲಾಗಿದೆ. ಇದರಿಂದ ಆ ಆ ತಾಲೂಕುಗಳಲ್ಲಿ ಶಾಸನವಿದ್ದ ಗ್ರಾಮಗಳ ಒಟ್ಟು ಸಂಖ್ಯೆ ತಿಳಿದು ಬರುತ್ತದೆ.

೨. ಶಾಸನ ನಂ: ಒಂದು ಊರಿನ ಶಾಸನ ಮುಗಿದೊಡನೆ ಮುಂದಿನ ಊರ ಶಾಸನಕ್ಕೆ ಹೊಸ ಸಂಖ್ಯೆಯನ್ನು ಕೊಡದೆ, ತಾಲೂಕು ಮುಗಿಯುವ ವರೆಗೆ ಹಾಗೆಯೇ ಮುಂದುವರಿಸಲಾಗಿದೆ. ಇದು ಒಂದು ತಾಲೂಕಿನಲ್ಲಿ ಈ ವರೆಗೆ ದೊರೆತ ಶಾಸನಗಳ ಒಟ್ಟು ಸಂಖ್ಯೆಯನ್ನು ತಿಳಿಸಿಕೊಡುತ್ತದೆ.

೩. ಗ್ರಾಮದ ಹೆಸರು: ಶಾಸನವನ್ನೊಳಗೊಂಡ ಗ್ರಾಮನಾಮಗಳು ಸಂಸ್ಕೃತ ವರ್ಣಮಾಲೆಯ ಕ್ರಮದಲ್ಲಿವೆ. ಸಾಮಾನ್ಯವಾಗಿ ಶುದ್ಧ ರೂಪಗಳಿಗಿಂತ ಈಗ ರೂಢವಾಗಿರುವ ರೂಪಗಳನ್ನೇ ಬಳಸಲಾಗಿದೆ.

೪. ವರದಿ ವರ್ಷ : ಇಲ್ಲಿಯ ವರದಿ-ವರ್ಷ "Annual report on South Indian Epigraphy" ಎಂಬ ಶಾಸನ ವರದಿ ಮತ್ತು ಅವುಗಳ ವರ್ಷವನ್ನು ಸೂಚಿಸುತ್ತದೆ. ಈ ಅಂಕಣದಲ್ಲಿ ಕೆಲವು ಸಲ ಇಸ್ವಿಯ ಕೆಳಗೆ (KRI) ಎಂದು ಬರೆದುದು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ವರದಿ-ವರ್ಷಗಳನ್ನು ನಿರ್ದೇಶಿಸುತ್ತದೆ. ಕೆಲವೆಡೆ ಕಾಣುವ RNG.C ಮತ್ತು RNG.T ಎಂಬವು ಕ್ರಮವಾಗಿ ಡಾ. ಆರ್. ಎನ್. ಗುರವ ಅವರಲ್ಲಿರುವ ಪಡಿಯಚ್ಚುಗಳ ಸಂಗ್ರಹ ಮತ್ತು ಅವರ ಪಿ.ಎಚ್‌ಡಿ. ಪ್ರಬಂಧಗಳನ್ನು ಸೂಚಿಸುತ್ತವೆ. ಇವುಗಳಿಗೆ ಹೊರತಾದ

ಅಂದರೆ EI, IA ಮೊದಲಾದ ಪತ್ರಿಕೆಗಳಲ್ಲಿ, Kadamba kula ಮೊದಲಾದ ಪುಸ್ತಕಗಳಲ್ಲಿ ಪ್ರಕಟವಾದವುಗಳಿಗೆ ಅಡ್ಡಗೆರೆಯನ್ನು ಬಳಸಲಾಗಿದೆ. ಕನ್ನಡ ಅಧ್ಯಯನಪೀಠದ ಸಂಗ್ರಹವನ್ನು ಸೂಚಿಸಲೂ ಅಡ್ಡಗೆರೆಯನ್ನು ಬಳಸಲಾಗಿದೆ.

೫. ನಂ : ವರದಿ–ವರ್ಷ ಅಂಕಣದ ಮುಂದಿನ 'ನಂ' ಎಂಬುದು ಆ ವರದಿಗಳಲ್ಲಿಯ ಶಾಸನ ನಂಬರನ್ನು ಸೂಚಿಸುತ್ತದೆ. ವರದಿಗಳಿಗೆ ಹೊರತಾದ ಮೂಲಗಳಿಂದ ಪತ್ತೆಹಚ್ಚಿದ ಶಾಸನವನ್ನು ಸೂಚಿಸಲು ಅಡ್ಡಗೆರೆ ಬಳಸಲಾಗಿದೆ.

೬. ದೊರೆತ ಸ್ಥಳ : ಶಾಸನಗಳ ಗ್ರಾಮನಿರ್ದೇಶನದಷ್ಟೇ ಮುಖ್ಯವಾದುದು, ಆ ಗ್ರಾಮದಲ್ಲಿ ಅವು ದೊರೆತ ಸ್ಥಳದ ನಿರ್ದೇಶನ. ಸ್ಥಳಾಂತರ ಮತ್ತು ಗ್ರಾಮಾಂತರಗೊಳ್ಳಬಹುದಾದ ಶಾಸನಗಳ ವಿಷಯದಲ್ಲಿ ಇಂಥ ಸೂಚನೆ ಅಭ್ಯಾಸಿಗೆ ಅತ್ಯವಶ್ಯವಾದುದು. ಈ ಸಂಗತಿಯನ್ನು ಆದಷ್ಟು ವಿವರವಾಗಿ ಕೊಡಲಾಗಿದೆ.

೭. ಅರಸ : ಶಾಸನಗಳು ಆಳುವ ಅಧಿಕಾರಿಯ ಹೆಸರನ್ನು ಹೊತ್ತು ಹುಟ್ಟುವ ದಾಖಲೆಗಳು. ಇವರು ಚಕ್ರವರ್ತಿ, ಸಾಮಂತ ಯಾರೇ ಇರಬಹುದು. ಇಲ್ಲಿ ಒಬ್ಬನನ್ನು, ಅವಶ್ಯವೆನಿಸಿದರೆ ಇಬ್ಬರನ್ನೂ ಹೆಸರಿಸಲಾಗಿದೆ. ಶಾಸನದಲ್ಲಿ ಹೆಸರು ಇರದಿದ್ದರೆ, ಇದ್ದೂ ತ್ರುಟಿತವಾಗಿದ್ದರೆ ಅದನ್ನು ಅಡ್ಡಗೆರೆ ಸೂಚಿಸುತ್ತದೆ.

೮. ಮಿತಿ : ಒಂದು ಊರಲ್ಲಿ ಅನೇಕ ಶಾಸನಗಳಿದ್ದರೆ ಅವುಗಳನ್ನು ಕಾಲಕ್ರಮವಾಗಿ ಜೋಡಿಸಲಾಗಿದೆ. ಶಾಸನಗಳಲ್ಲಿ ಹೇಳಿದ ಹಿಂದೂ ಮಿತಿಯನ್ನು ಕ್ರಿಸ್ತವರ್ಷಕ್ಕೆ ಸಮಗೊಳಿಸಿ ನಮೂದಿಸಿದ್ದಾಗಿದೆ. ಮಿತಿ ಹೇಳಿರದಿದ್ದರೆ, ಹೇಳಿದ್ದರೂ ತ್ರುಟಿತವಾಗಿದ್ದರೆ ಅರಸು, ಅಕ್ಷರಗಳನ್ನು ಗಮನಿಸಿ ಸುಮಾರು ಶತಮಾನವನ್ನೂ ಊಹಿಸಿದ್ದೇವೆ. ಆಗ ಬಳಸಿದ ಸಂಕೇತ ಸು.ಶ. ಇವುಗಳಿಗೆ ಮೀರಿದ ಪಕ್ಷದಲ್ಲಿ ಅಡ್ಡಗೆರೆಯನ್ನು ಬಳಸಲಾಗಿದೆ.

೯. ಪ್ರಕಟನೆ : ಉತ್ತರಕರ್ನಾಟಕದಲ್ಲಿ ಹೆಚ್ಚು ಪ್ರಕಟವಾದುವು, ಧಾರವಾಡ ಜಿಲ್ಲೆಯ ಶಾಸನಗಳು, ಇವುಗಳಲ್ಲಿ ಒಂದು ಶಾಸನ, ಒಂದಕ್ಕಿಂತ ಹೆಚ್ಚು ಕಡೆಗೆ ಪ್ರಕಟವಾಗಿದ್ದರೆ ಆ ಎಲ್ಲ ಆಕರಗಳನ್ನು ಸೂಚಿಸಿದ್ದೇವೆ. ಸಾಮಾನ್ಯವಾಗಿ ಪ್ರಕಟವಾಗದವುಗಳಿಗಾಗಿ ಅಡ್ಡಗೆರೆಯನ್ನು ಉಪಯೋಗಿಸಲಾಗಿದೆ. SII XVIII ದಲ್ಲಿ ಪ್ರಕಟವಾಗಲಿರುವುವನ್ನು ಸೂಚಿಸಿದ್ದೇವೆ.

೧೦. ವಿಷಯ : ಕರ್ನಾಟಕದ ಶಾಸನಗಳ ವಿಷಯ ವೈವಿಧ್ಯಪೂರ್ಣವಾದುದು. ರಾಜಕೀಯ, ಧಾರ್ಮಿಕ ಇತ್ಯಾದಿ ಕಾರ್ಯ ಚಟುವಟಿಕೆಗಳ ಕರ್ಮಭೂಮಿಯಾದ ಧಾವಾಡ ಜಿಲ್ಲೆ ಇದಕ್ಕೆ ಹೊರತಲ್ಲ. ಈ ಅಂಕಣದ ಮೇಲೆ ದೃಷ್ಟಿ ಬೀರಿದರೆ ಇಡೀ ಜಿಲ್ಲೆಯ ಬಗೆಬಗೆಯ ಚಿತ್ರವೇ ಕಣ್ಣೆದುರು ಸರಿದುಹೋಗುತ್ತದೆ. ಇಲ್ಲಿ ಶಾಸನದ ಕೇಂದ್ರ ವಿಷಯವನ್ನು ಮಾತ್ರ ಒಂದೆರಡು ವಾಕ್ಯಗಳಲ್ಲಿ ಸಂಗ್ರಹಿಸಲಾಗಿದೆ. ಹೀಗೆ ಮಾಡುವಾಗ ಕೆಲವುಸಲ ಯಾವುದು ಮುಖ್ಯ, ಯಾವುದು ಅಮುಖ್ಯ ಎಂಬ ಸಂದೇಹದಲ್ಲಿ ನಿಲ್ಲಬೇಕಾಯಿತು. ಹೀಗಿದ್ದರೂ ಮುಖ್ಯ ಸಂಗತಿಯ ಕಡೆಗೆ ಗುರಿಯಿಟ್ಟು ವಿಷಯವನ್ನು ಸಂಗ್ರಹಿಸಿದ್ದೇವೆ.

ಸೂಚಿಯ ಕಾರ್ಯಶಿಲ್ಪ :

ಈ ಮಹಾಕಾರ್ಯದ ಪ್ರಾಥಮಿಕ ದುಡಿಮೆಗಾರರೆಂದರೆ ನಮ್ಮ ಶಾಸನ ವಿಭಾಗದ ವಿದ್ಯಾರ್ಥಿಗಳು. ಮೊದಲವರ್ಷ ಶಾಸನಶಾಸ್ತ್ರವನ್ನು ಓದಿ ಮೂಲಭೂತಜ್ಞಾನವನ್ನು ಸಂಪಾದಿಸಿದ

ಈ ಸೈನ್ಯಕ್ಕೆ, ಎರಡನೆಯ ವರ್ಷ ಸೂಚಿಕಾರ್ಯದತ್ತ ಬೆರಳು ನೀಡಲಾಗುತ್ತದೆ. ಸೂಚಿಯ ರಚನಾಮಹತ್ವ, ಕಾರ್ಯವಿಧಾನ ಇತ್ಯಾದಿಗಳ ತರಬೇತು ನೀಡಿ, ಈ ಬಗ್ಗೆ ಅರಿವು ಆಸಕ್ತಿಗಳನ್ನು ಕುದುರಿಸಿ, ಆಮೇಲೆ ವರದಿ, ಸಂಪುಟ, ಪತ್ರಿಕೆಗಳಲ್ಲಿ ಹೊಕ್ಕು ಆ ಆ ಜಿಲ್ಲೆಗೆ ಸಂಬಂಧಪಟ್ಟ ಶಾಸನಗಳ ಶೋಧನೆಗೆ ಅವರನ್ನು ತೊಡಗಿಸಲಾಗುವುದು. ಸುಮಾರು ಎರಡು ತಿಂಗಳು ಕಳೆಯುವಷ್ಟರಲ್ಲಿ, ಹಲವು ಮೂಲಗಳಿಂದ ಸಂಗ್ರಹಿಸಿದ ವಿಷಯವನ್ನೊಳಗೊಂಡ ಪಟ್ಟಿಕೆಗಳು ಸಿದ್ಧವಾಗುತ್ತವೆ. ಆ ಮೇಲೆ ಈ ಪಟ್ಟಿಕೆಗಳ ಪರಿಶೀಲನೆ ನಡೆದು ಪುನರುಕ್ತಗಳನ್ನು ಬಿಡುವ, ಅಸಮರ್ಪಕಗಳನ್ನು ಸಮರ್ಪಕಗೊಳಿಸುವ, ಗುರುತಿಸಿದವುಗಳನ್ನು ಗುರುತಿಸುವ ತಪ್ಪುಗಳನ್ನು ತಿದ್ದುವ ಕಾರ್ಯ ನಡೆಯುತ್ತದೆ. ಇದು ವಿಷಯಕ್ಕೆ ಸಂಬಂಧಪಟ್ಟ ಕಾರ್ಯವಿಧಾನ.

ಇಷ್ಟೇ ಮಹತ್ವಪೂರ್ಣವಾದುದು, ಈ ವಿಷಯವನ್ನು ಸೂಚಿಯನ್ನಾಗಿಡುವ ಕಾರ್ಯವಿಧಾನ. ಈಗ ಎಲ್ಲ ಪಟ್ಟಿಕೆಗಳ ಮರುಪರಿಶೀಲನೆ ನಡೆಯುತ್ತದೆ. ವಿಷಯ ನಿರೂಪಣೆ, ತಂತ್ರವ್ಯವಸ್ಥೆ, ಸಂಕ್ಷೇಪಗಳ ಬಳಕೆ ಮೊದಲಾದುವುಗಳಲ್ಲಿ ಏಕರೂಪತೆಯನ್ನು ಸಾಧಿಸಲು ದುಡಿಯ ಬೇಕಾಗುತ್ತದೆ. ಇಷ್ಟು ಪರಿಶ್ರಮವನ್ನು ಬೆನ್ನಿಗೆ ಕಟ್ಟಿಕೊಂಡು ಅಚ್ಚಿನ ಪ್ರತಿಯನ್ನು ಸಿದ್ಧಪಡಿಸಲಾಗುತ್ತದೆ.

ವಿಶೇಷ ಸೂಚನೆ :

ಈ ಸೂಚಿಯ ಮುದ್ರಣಕಾರ್ಯ ಕೊನೆಯ ಹಂತದಲ್ಲಿರುವಾಗ, ಧಾರವಾಡ ಜಿಲ್ಲೆಯ ಅನೇಕ ಶಾಸನಗಳನ್ನೊಳಗೊಂಡ SII XVIII ಸಂಪುಟ ಇಷ್ಟರಲ್ಲಿ ಪ್ರಕಟವಾಗುವುದರಲ್ಲಿದೆಯೆಂದು ತಿಳಿದುಬಂದಿತು. ಪ್ರಕಟನ ಪೂರ್ವದಲ್ಲಿಯೇ ಈ ಸಂಪುಟವನ್ನು ನೋಡಲು ಅವಕಾಶ ಕಲ್ಪಿಸಿಕೊಟ್ಟವರು, ಶಾಸನ ಇಲಾಖೆಯ ಮುಖ್ಯಸ್ಥರಾದ ಡಾ. ಜಿ. ಎಸ್. ಗಾಯಿ ಮತ್ತು ಈ ಸಂಪುಟದ ಸಂಪಾದಕರಾದ ಶ್ರೀ ನೆಲಮಂಗಲ ಲಕ್ಷ್ಮೀನಾರಾಯಣರಾಯರು. ಶಾಸನ ಲೋಕದ ಈ ಅಶ್ವಿನಿದೇವತೆಗಳ ಔದಾರ್ಯಕ್ಕೆ ಅನಂತ ವಂದನೆಗಳು. ಈ ಸಂಪುಟದ ಮೂಲಕ ಪ್ರಕಟವಾಗಲಿರುವ ಧಾರವಾಡ ಜಿಲ್ಲೆಯ ಶಾಸನಗಳನ್ನು ಅನುಬಂಧದಲ್ಲಿ ಸೂಚಿಸಲಾಗಿದೆ.

ಈ ಆವೃತ್ತಿಯನ್ನು ಕುರಿತು :

ಧಾರವಾಡ ಜಿಲ್ಲೆಯಲ್ಲಿ ಸಿಗುವ ಸರ್ವಶಾಸನಗಳನ್ನು ಅಂಗೈಮೇಲೆ ತೋರಿಸಿಕೊಡುವ ಇಂಥ ಸೂಚಿಯ ರಚನೆ ನಮಗೆ ಪ್ರಥಮ ಅನುಭವ. ಹೀಗಾಗಿ ಎಷ್ಟೇ ಖಚಿತ ಮಾಡಬೇಕೆಂದರೂ ಯೋಜನೆ (plan) ಯನ್ನು ರೂಪಿಸುವಾಗಲೇ ಒಂದೆರಡು ಕೊರತೆಗಳು ಉಳಿದವು, ವಿಷಯ ಸಂಗ್ರಹಿಸುವಾಗ ಕೆಲವು ತಪ್ಪುಗಳು ಸೇರಿಕೊಂಡವು; ಅಚ್ಚಾಗುವಾಗ ಕೆಲವು ಮುದ್ರಣದೋಷಗಳು ತಲೆದೋರಿದವು. ತೀರ ಅಲ್ಪಪ್ರಮಾಣದಲ್ಲಿರುವ ಈ ನ್ಯೂನತೆಗಳನ್ನು ಮುಂದಿನ ಆವೃತ್ತಿಯಲ್ಲಿ ತಿದ್ದಿಕೊಳ್ಳುತ್ತೇವೆ.

ಈ ಪ್ರದೇಶದಲ್ಲಿ ಈಗಾಗಲೇ ಪರಿವೀಕ್ಷಿತವಾದ ಶಾಸನಗಳೆಲ್ಲ ಅಚ್ಚಾಗಬೇಕು. ಮರುಪರಿವೀಕ್ಷಣೆ ನಡೆದು ಹೊಸ ಹೊಸ ಶಾಸನಗಳೂ ಬೆಳಕು ಕಾಣಬೇಕು. ಈ ಉಭಯ ಕಾರ್ಯಗಳು ಪೂರ್ಣವಾದರೆ ಮಾತ್ರ, ಪ್ರಸ್ತುತಸೂಚಿ ದ್ವಿತೀಯ ಆವೃತ್ತಿಯಲ್ಲಿ ದ್ವಿಗುಣಿತ ಗಾತ್ರದಿಂದ ಹೊರಬರಬಹುದಾಗಿದೆ.

ಕೃತಜ್ಞತೆಗಳು :

ಇಂಥ ಒಂದು ಯೋಜನೆ ಆಕಾರಪಡೆದು ಪ್ರಕಟವಾಗಬೇಕಾದರೆ ಹಲವು ಮೂಲಗಳ ಪ್ರತ್ಯಕ್ಷ-ಪರೋಕ್ಷ ನೆರವು ಅಗತ್ಯ. ಅಂಥ ನೆರವುಪಡೆದ ಭಾಗ್ಯ ನಮ್ಮದಾಗಿದೆ. ಈ ಮೊದಲು ಪರಿಶ್ರಮದಿಂದ ಶಾಸನಗಳನ್ನು ಪರಿವೀಕ್ಷಿಸಿದ, ಪ್ರಕಟಿಸಿದ ಶಾಸನ ಇಲಾಖೆಗಳಿಗೆ, ಸಂಸ್ಥೆಗಳಿಗೆ, ವಿದ್ವಾಂಸರಿಗೆ ನಮ್ಮ ವಂದನೆಗಳು ಸಲ್ಲಬೇಕು.

ಅಧ್ಯಯನಪೀಠದ ಅಂದಿನ ಮುಖ್ಯಸ್ಥರೂ ವಿಶ್ವವಿದ್ಯಾಲಯದ ಇಂದಿನ ಕುಲಪತಿಗಳೂ ಆದ ಡಾ. ಆರ್. ಸಿ ಹಿರೇಮಠ ಅವರ ದೂರದರ್ಶಿತ್ವದ ಫಲ, ಶಾಸನವಿಭಾಗ. ಈ ಯೋಜನೆ ಅಸ್ತಿತ್ವಕ್ಕೆ ಬಂದುದು ಅವರ ಚೈತನ್ಯಪೂರ್ಣ ಮಾರ್ಗದರ್ಶನದಿಂದ.

ಅಧ್ಯಯನಪೀಠದ ಇಂದಿನ ಮುಖ್ಯಸ್ಥರಾದ ಡಾ. ಎಂ. ಎಸ್. ಸುಂಕಾಪುರವರು ಕನ್ನಡದ ಕುಟುಂಬವತ್ಸಲರು. ಈ ಕಾರ್ಯ ಪವನವೇಗದಲ್ಲಿ ಸಾಗುವ ಏನೆಲ್ಲ ಅನುಕೂಲತೆಗಳನ್ನು ಅವರು ಕಲ್ಪಿಸಿಕೊಟ್ಟಿದ್ದಾರೆ.

ಕನ್ನಡದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವ ಈ ಇಬ್ಬರಿಗೂ ನನ್ನ ಹಾದಿಕ ವಂದನೆಗಳು.

ನಮ್ಮ ಶಾಸನವಿಭಾಗದ ಸಹಾಯಕ ಸಂಶೋಧಕರಾದ ಡಾ. ಆರ್. ಎನ್. ಗುರವ ಅವರು ಈ ಸೂಚಿಕಾರ್ಯಕ್ಕೆ ತುಂಬ ನೆರವಾದುದಲ್ಲದೆ ತಮ್ಮ ವಶದಲ್ಲಿರುವ ಹಲವು ಪಡಿಯಚ್ಚುಗಳನ್ನು ಒದಗಿಸಿರುವರು. ಹಗಲೆಂದರೆ ಹಗಲು, ರಾತ್ರಿಯೆಂದರೆ ರಾತ್ರಿ ದುಡಿದು ಸೂಚಿಯ ಸಿದ್ಧತೆ, ಪ್ರಕಟಣೆಗಳಿಗಾಗಿ ಪರಿಶ್ರಮಿಸಿದ್ದಾರೆ, ಇನ್ನೊಬ್ಬ ಸಹಾಯಕ ಸಂಶೋಧಕರಾದ ಶ್ರೀ ಬಿ. ಆರ್. ಹಿರೇಮಠ ಅವರು. ಇತ್ತೀಚೆ ಈ ವಿಭಾಗಕ್ಕೆ ಬಂದ ಶ್ರೀ. ಸಿ. ಆಯ್. ಪಾವಟೆ ಅವರ ಸಹಕಾರವೂ ಈ ಕಾರ್ಯಕ್ಕೆ ಒದಗಿದೆ. ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು.

ಶಾಸನ ವಿಭಾಗದ ವಿದ್ಯಾರ್ಥಿಗಳು, ಇವರು ಈ ವಿಭಾಗದ ಸಂಪತ್ತು. ಸೂಚಿಯನ್ನು ಸಿದ್ಧಪಡಿಸುವ ಪ್ರಾಥಮಿಕ ಹಂತದಲ್ಲಿ ಸಂಜೀವಿನಿಯನ್ನು ಕೇಳಿದರೆ ಬೆಟ್ಟವನ್ನೇ ತರುತ್ತಿದ್ದ ಇವರ ಸಾಹಸಕ್ಕೆ ಮಾರುಹೋಗಿದ್ದೇನೆ. ಈ 'ಜೋಳವಾಳಿ-ವೇಳೆವಾಳಿ'ಗಳಿಗೆ ಅನಂತ ಕೃತಜ್ಞತೆಗಳು.

ಈ ಕೃತಿಯ ಪ್ರಕಟನೆಯ ಬಗ್ಗೆ ತೀವ್ರ ಆಸಕ್ತಿ ವಹಿಸಿದವರು ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರು ಮತ್ತು ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕರು. ಇವರು ಮನಸ್ಸು ಮಾಡಿರದಿದ್ದರೆ ಈ ಕೃತಿ ಇಷ್ಟು ಸುಂದರವಾಗಿ ಇಷ್ಟು ತೀವ್ರವಾಗಿ ಅಚ್ಚಾಗುತ್ತಿರಲೇ ಇಲ್ಲ. ಇವರಿಗೆ ನನ್ನ ವಂದನೆಗಳು.

ತೀರ ಕ್ಲಿಷ್ಟಕರವಾದ ಈ ಸೂಚಿಯ ಅಚ್ಚಿನ ಕಾರ್ಯವನ್ನು ನಮ್ಮ ವಿಶ್ವವಿದ್ಯಾಲಯದ ಅಚ್ಚುಕೂಟದ ನಿರ್ದೇಶಕರಾದ ಶ್ರೀ ಜಿ.ಬಿ. ಮನ್ವಾಚಾರ್ ಅವರು ಆಹ್ವಾನವೆಂಬಂತೆ ಸ್ವೀಕರಿಸಿ, ತುಂಬ ಉತ್ಸಾಹದಿಂದ ಪೂರೈಸಿಕೊಟ್ಟಿದ್ದಾರೆ. ನಾವು ಕೊಡುವ ಕಾಟ, ಹಿಂಸೆ, ತೊಂದರೆ ಏನೆಲ್ಲವನ್ನೂ ಸಹಿಸಿ ಅಚ್ಚುಕೂಟದ ಸಿಬ್ಬಂದಿಗಳು ಸಹಕರಿಸಿದ್ದಾರೆ. ಈ ಸಹಕಾರಕ್ಕೆ ಉಪಕೃತರಾಗಿದ್ದೇವೆ.

ಧಾರವಾಡ

೧೨-೪-೧೯೭೫ — ಎಂ.ಎಂ. ಕಲಬುರ್ಗಿ

❖❖

ಪರಿವಿಡಿ

ಧಾರವಾಡ ಜಿಲ್ಲೆಯ ಶಾಸನಸೂಚಿ

ಧಾರವಾಡ ತಾಲೂಕ

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
೧	೧	ಅಂಬಳ್ಳಿ	೧೯೫೪-೫೫	೮೮	ಹೊಲ ವೀರಗಲ್ಲು	ರಾ; ಕನ್ನರದೇವ
೨	೨	ಅಮ್ಮಿನಭಾವಿ	೧೯೨೫-೨೬	೪೩೧	ಜೈನ ಬಸದಿ ಮೇಲ್ಛಾವಣಿ	ಕ.ಚಾ; ವಿಕ್ರಮಾದಿತ್ಯ VI
	೩	ಅಮ್ಮಿನಭಾವಿ	೧೯೨೫-೨೬	೪೩೨	ಜೈನಬಸದಿ ಎದುರು	–
೪		ಅಮ್ಮಿನಭಾವಿ	೧೯೨೫-೨೬	೪೩೦	ಜೈನಬಸದಿ ಎದುರು	ಕ.ಚಾ ಜಗದೇಕಮಲ್ಲ II
	೫	ಅಮ್ಮಿನಭಾವಿ	೧೯೨೫-೨೬	೪೨೯	ಮಲ್ಲಿಕಾರ್ಜುನ ದೇವಾಲಯ	ಗೋ.ಕ; ಪೆರ್ಮಾಡಿದೇವ
	೬	ಅಮ್ಮಿನಭಾವಿ	೧೯೫೨-೫೩	೭೦	ಜೈನಬಸದಿ ವರ್ಧಮಾನಪೀಠ	–
	೭	ಅಮ್ಮಿನಭಾವಿ	೧೯೨೫-೨೬	೪೨೮	ಕಲ್ಮೇಶ್ವರಗುಡಿ ವೀರಗಲ್ಲು	ಗೋ.ಕ. ತ್ರಿಭುವನಮಲ್ಲ
	೮	ಅಮ್ಮಿನಭಾವಿ	–	–	ಪಂಚಗೃಹ ಹಿರೇಮಠ ಆವರಣ (ಈಗ ಕ. ಅ.ಪೀಠದಲ್ಲಿದೆ)	–
	೯	ಅಮ್ಮಿನಭಾವಿ	೧೯೨೫-೨೬	೪೩೩	ಕ್ಷೌರಿಕರ ಮನೆಯ ಹಿತ್ತಲ	ವಿ; ಸದಾಶಿವರಾಯ
	೧೦	ಅಮ್ಮಿನಭಾವಿ		–	ಜೈನಬಸದಿ ನೇಮಿನಾಥಪೀಠ	–
೩.	೧೧	ಅಳ್ನಾವರ	೧೯೨೫-೨೬	೪೭೦	ಪ್ಯಾಟಿ ಓಣಿ ಜುಮ್ಮಾಮಸೀದೆ	ಗೋ.ಕ. ಗೋವಲದೇವ

ಮಿತಿ	ಪ್ರಕಟನೆ	ವಿಷಯ
ಸು.ಶ; ೧೦	-	ಗೋಗ್ರಹಣದಲ್ಲಿ ಮಾದಯ್ಯನ ವೀರಮರಣ.
೧೦೭೧-೭೨	SII XI-ii 121	ಕದಂಬ ಜಯಕೇಶಿ ಗೋವೆಯನ್ನಾಳುವಾಗ, ಶಿವದಾಸಯ್ಯನು ಅಮ್ಮಯ್ಯನಬಾವಿಯಲ್ಲಿ ಶಿವಾಲಯವನ್ನು ಕಟ್ಟಿಸಿ ಭೂದಾನ ಮಾಡಿದ ಉಲ್ಲೇಖ-ಛಂದೋವಿಶೇಷ: ಮೂಲಷಟ್ಪದಿ.
೧೧೧೨	SII XI-ii 191	ಉಣಕಲ್ಲದ ಉತ್ತವರಾಶಿಪಂಡಿತನ ಹೆಂಡತಿ ಚಂದಿಕಬ್ಬೆ ಆದಿತ್ಯದೇವನ ಸತ್ರಕ್ಕೆ ಬಿಟ್ಟ ಭೂದಾನ.
೧೧೪೬	SII XV 31	ದಂಡನಾಯಕ ಬಮ್ಮಣಯ್ಯನಿಂದ ಸ್ವಯಂಭೂ ಮೂಲಸ್ಥಾನ ದೇವರಿಗೆ ಭೂದಾನ.
೧೧೬೩	SII XV 228	ಮಾಡಬೊಪ್ಪನು ತ್ರಿಣೇಯನ ಗಣಪೂಜೆಗೆ ನೀಡಿದ ಭೂದಾನ.
ಸು.ಶ;೧೨	–	ಅಸ್ಪಷ್ಟ.(ಇದು ಚಂದ್ರನಾಥ ಪೀಠದ ಶಾಸನ. ಈ ವಿಗ್ರಹವನ್ನು ಮಾಡಿಸಿದವ ಬಮ್ಮಿಶೆಟ್ಟಿ)
೧೨೪೩	SII XV 231	ತ್ರುಟಿತ. ತ್ರಿಭುವನಮಲ್ಲದೇವನ ಮಹಾಪಸಾಯಿತನಾದ ಮಾಯಿನಾಯಕನ ವೀರಮರಣ.
೧೨೮೪	ಕ-ಭಾ ೬-೪	ಅಮ್ಮಿನಭಾವಿಯ ಮಡಿವಳರಿಂದ ಮಡಿವಾಳ ಮಾಚಿದೇವನ ವಿಗ್ರಹ ಪ್ರತಿಷ್ಠಾಪನೆ.
೧೩೪೭	SII XV 257	ತಿಮ್ಮೋಜ, ಭದ್ರೋಜ ಮೊದಲಾದ ನಾವಿದರ ವಿನಂತಿಯ ಮೇರೆಗೆ ಅರಸನು ನಾವಿದ ಸುಂಕ ವಿನಾಯತಿ ಮಾಡಿದ ಉಲ್ಲೇಖ.
೧೮೯೨	–	ಬಲ್ಲಾಳರಾವ ಒಡೆಯರು ದೇಸಾಯಿ ಅವರಿಂದ ನೇಮಿನಾಥ ವಿಗ್ರಹ ಸ್ಥಾಪನೆ.
೧೦೮೧	SII XV 225	ನರಸಿಂಗಯ್ಯ ಸೆಟ್ಟಿಯಿಂದ ಬಸದಿಗೆ ಭೂದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೧೨	ಅಳ್ನಾವರ	೧೯೨೫-೨೬	೪೭೧	ಬರಗುಂಡಿಯವರ ಮನೆಯ ಆವರಣ-ವೀರಗಲ್ಲು	ಗೋ.ಕ. ಗೋವಲದೇವ
	೧೩	ಅಳ್ನಾವರ	೧೯೨೫-೨೬	೪೬೯	ಕಲ್ಮೇಶ್ವರ ಗುಡಿ ಎದುರು	–
	೧೪	ಅಳ್ನಾವರ	೧೯೨೫-೨೬	೪೬೮	ಲಿಂಗಾಯತಮಠದ ಹೊಲ	–
೪.	೧೫	ಕನಕೂರ	೧೯೨೫-೨೬	೪೫೫	ಕನಕಮ್ಮನಗುಡಿ ಕಂಬ	ಕ.ಚಾ; ವಿಕ್ರಮಾದಿತ್ಯ VI
೫.	೧೬	ಕಲ್ಲೆ	೧೯೨೫-೨೬	೪೪೯	ಬಸವಣ್ಣನ ಗುಡಿಯ ಹತ್ತಿರ	–
೬.	೧೭	ಕೊಟಬಾಗಿ	೧೯೨೫-೨೬	೪೪೭	ಬಸವಣ್ಣನ ಗುಡಿ ನಂದಿಕಂಬ	ಯಾ; ಮಹಾದೇವರಾಯ
	೧೮	ಕೊಟಬಾಗಿ	೧೯೨೫-೨೬	೪೪೮	ಅದೇಕಂಬ	–
೭.	೧೯	ಗರಗ	RNG.T	–	ಅಗಸಿ ಓಣಿಯ ಗರಡಿಮನೆ	ಗೋ.ಕ. ಜಯಕೇಶಿ III
	೨೦	ಗರಗ	೧೯೨೫-೨೬	೪೪೧	ಕೆರೆಯ ಏರಿ	–
	೨೧	ಗರಗ	E	–	ಜೈನರ ಓಣಿ	ಯಾ. ರಾಮಚಂದ್ರ
	೨೨	ಗರಗ	೧೯೨೬-೨೭	೪೪೨	ಕೆರೆಯ ಏರಿ	–
೮.	೨೩	ಗೂಗಿಕಟ್ಟಿ	೧೯೨೬-೨೭	೪೬೫	ಕೇಶವಮೂರ್ತಿ ಪಾದಪೀಠ	ಕ.ಚಾ; ವಿಕ್ರಮಾದಿತ್ಯ VI
೯	೨೪	ತಡಕೋಡ	೧೯೨೫-೨೬	೪೪೬	ಕಲ್ಮೇಶ್ವರಗುಡಿ-ಬಲದ ಮಾಡ	–
	೨೫	ತಡಕೋಡ	೧೯೨೫-೨೬	೪೪೫	ಕಲ್ಮೇಶ್ವರಗುಡಿ-ಎಡದ ಮಾಡ	ಯಾ; ರಾಮಚಂದ್ರ

ಮಿತಿ	ಪ್ರಕಟನೆ	ವಿಷಯ
-	SII 226	ಅತಿ ತ್ರುಟಿತ.
ಸು. ಶ; ೧೨	SII XV 234	ತ್ರುಟಿತ.
೧೫೦೫	SII XV 693	ಹುಬ್ಬಳ್ಳಿಯ ಚಿಕ್ಕಮಲ್ಲಿಶೆಟ್ಟಿ ಸಲ್ಲೇಖನವಿಧಿಯಿಂದ ಮಡಿದ ಉಲ್ಲೇಖ. ಛಂದೋವಿಶೇಷ : ರಗಳೆ
೧೧೦೪	SII XI-ii 154	ಜಯಕೇಶಿ ಅರಸನಿಂದ ವಾಮನ ಭಟ್ಟೋಪಾಧ್ಯಾಯನಿಗೆ ಕನಕಾಪುರ ಗ್ರಾಮದಾನ.
ಸು. ಶ; ೮	SII XV 448	ವೀರನೊಬ್ಬನ ಮರಣ.
೧೨೬೪	SII XV 195	ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ಕೊಟಬಾಗಿ ಗ್ರಾಮದಾನ.
ಸು. ಶ; ೧೩	SII XV 619	ಬನವಿಸೆಟ್ಟಿಯಿಂದ ಕೆರೆಗೆ ದಾನ.
೧೨೦೪	–	ತುಣುಕು ಅಸ್ಪಷ್ಟ.
೧೨೩೦	SII XV 610	ಯಾಪನೀಯ ಸಂಘ, ಕುಮುದಿಗಣದ ಶಾಂತಿವೀರದೇವರ ಸಮಾಧಿ ಮರಣ.
೧೨೮೭	–	ತ್ರುಟಿತ. ಮಹಾಮಂಡಳೇಶ್ವರನೊಬ್ಬನಿಂದ ಪಡೆದುಕೊಂಡು ಬೆಳ್ಳಿಟ್ಟಿಗೆಯ ಮಹಾಪ್ರಭು ನೀಡಿದ ದಾನ.
ಸು.ಶ; ೧೩	SII XV 618	ಅಸ್ಪಷ್ಟ ಯಾಪನೀಯ ಸಂಘ, ಕುಮುದಿಗಣದ ಉಲ್ಲೇಖ.
೧೧೨೫	SII XV 8 SII XI-ii 199	ತ್ರಿಭುವನಮಲ್ಲನ ಮಗಳು ಹಾಗೂ ಎರಡನೆಯ ಜಯಕೇಶಿಯ ಹೆಂಡತಿಯಾದ ಮೈಳಲದೇವಿ–ಯಿಂದ ಗೂಗಿಕಟ್ಟಿಯಲ್ಲಿ ಕೇಶವದೇವರ ಪ್ರತಿಷ್ಠಾಪನೆ.
ಸು.ಶ; ೧೨	SII XV 552	ಬಾಳಚಂದ್ರನ ಶಿಷ್ಯ ವಾಸುಪೂಜ್ಯನ ಕಲ್ಯಾಣಕ್ಕಾಗಿ ಚಂದ್ರನಾಥತೀರ್ಥಂಕರನ ಸ್ತೋತ್ರ.
೧೨೮೨	SII XV 199	ಕನ್ನರದೇವನ ಅರಸಿಯ ಆದೇಶದ ಮೇರೆಗೆ ಸರ್ವಾಧಿಕಾರಿ ಮಾಯಿದೇವನಿಂದ ಬಸದಿಯ ನಿರ್ಮಾಣ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
೧೦	೨೬	ತೇಗೂರ	೧೯೨೫–೨೬	೪೫೧	ಊರ ಚಾವಡಿ	ಕ.ಚಾ; ವಿಕ್ರಮಾದಿತ್ಯ VI
೧೧	೨೭	ದೇವರ ಹುಬ್ಬಳ್ಳಿ	೧೯೨೫–೨೬	೪೩೪	ಕೋಡಿ ಬಸವಣ್ಣನ ಗುಡಿ–ಎದುರು	ಗೋ.ಕ; ಜಯಕೇಶಿ III
	೨೮	ದೇವರ ಹುಬ್ಬಳ್ಳಿ	೧೯೨೫–೨೬	೪೩೫	ಊರ ಅಗಸಿ	ವಿ; ಸದಾಶಿವರಾಯ
೧೨	೨೯	ಧಾರವಾಡ	–	–	ಹೊಂಡದ ವೀರಭದ್ರ ದೇವಾಲಯ	–
	೩೦	ಧಾರವಾಡ	೧೯೪೬–೪೭ (KRI)	೧೮	ಕನ್ನಡ ಸಂಶೋಧನ ಸಂಸ್ಥೆ	–
	೩೧	ಧಾರವಾಡ	೧೯೪೯–೫೦ (KRI)	೨೬	ರಾಜಾಲಖಮಗೌಡ ಹೈಸ್ಕೂಲ	
	೩೨	ಧಾರವಾಡ	೧೯೪೩–೪೪ (KRI)	೬	ದುರ್ಗಾದೇವಿ ಗುಡಿ–ಆವರಣ	ಕ.ಚಾ; ವಿಕ್ರಮಾದಿತ್ಯ VI
	೩೩	ಧಾರವಾಡ	೧೯೪೯–೫೦ (KRI)	೩೨	ವಿದ್ಯಾರಣ್ಯ ಹೈಸ್ಕೂಲು –ವೀರಗಲ್ಲು	–
	೩೪	ಧಾರವಾಡ	೧೯೪೯–೫೦ (KRI)	೨೧	ರಾಜಾಲಖಮನಗೌಡ ಹೈಸ್ಕೂಲ–ಕಂಬ	ವಿ;ಮಲ್ಲಿಕಾರ್ಜುನ
೧೩	೩೫	ನರೇಂದ್ರ	–	–	ಶಂಕರಲಿಂಗ ದೇವಾಲಯ–ಭಾವಣಿ	ಕ.ಚಾ ವಿಕ್ರಮಾದಿತ್ಯ VI
	೩೬	ನರೇಂದ್ರ	೧೯೫೮–೫೯	೫೨೮	ಮಲ್ಲಿಕಾರ್ಜುನ ದೇವಾಲಯ ಬಲಬದಿ	ಕ.ಚಾ; ವಿಕ್ರಮಾದಿತ್ಯ VI

ಮಿತಿ	ಪ್ರಕಟನೆ	ವಿಷಯ
೧೦೮೨	SII XI-ii 128	ಜಯದೇವಗಾವುಂಡನಿಂದ ಕಲಿದೇವದೇವಾಲಯದ ಜೀರ್ಣೋದ್ಧಾರ ಮತ್ತು ದಾನ.
೧೨೦೬	SII XV 232 KK p 401-3 KI V 66	ಅಗ್ರಹಾರ ಹುಪ್ಪವಳ್ಳಿಯ ಮಹಾಜನರು ಮಹಾಲಕ್ಷ್ಮಿದೇವಿಯ ಪ್ರತಿಷ್ಠೆಮಾಡಿ ದೇವಾಲಯಕ್ಕೆ ಭೂದಾನ ಮಾಡಿದ ಉಲ್ಲೇಖ.
೧೫೪೭	SII XV 258	ತಿಮ್ಮೋಜ, ರಾಮೋಜ ಮೊದಲಾದ ನಾವಿದರ ವಿನಂತಿಯ ಮೇರೆಗೆ ರಾಮರಾಯನಿಂದ ನಾವಿದ ಸುಂಕದ ವಿನಾಯತಿ.
ಸು.ಶ; ೯	–	ಅಸ್ಪಷ್ಟ, ಅಗ್ರಹಾರ ನವಿಲೂರಿನ ಉಲ್ಲೇಖ.
ಸು.ಶ; ೧೧	–	ತುಣುಕು, ಊರೊಡೆಯ ನಾಗವರ್ಮಯ್ಯನಿಂದ ಶಿವಾಲಯಕ್ಕೆ ದಾನ
೧೧೧೦	KI VI 16	ತ್ರುಟಿತ ದೇವರಾಶಿಪಂಡಿತರ ಉಲ್ಲೇಖ.
೧೧೧೭	KI V 16	ತ್ರುಟಿತ, ಪೆರ್ಗಡೆ ಭಾಸ್ಕರಯ್ಯನಿಂದ ಧರ್ಮೇಶ್ವರ ದೇವರಿಗೆ ಸುಂಕಗಳ ದಾನ.
ಸು.ಶ; ೧೪	–	ತ್ರುಟಿತ, ಮಲ್ಲಿದೇವ ಹಾಗೂ ರಾವುತರ ಉಲ್ಲೇಖ.
೧೪೪೮	KI VI 68	ತ್ರುಟಿತ, ನಂದಿಸ್ತಂಭ ನಿಲ್ಲಿಸಿ ದಾನಮಾಡಿದ ಉಲ್ಲೇಖ.
೧೧೨೩-೨೬	EI XIII p316-26	ಮಹಾಮಂಡಲೇಶ್ವರ ಜಯಕೇಶಿಯಾದಿಗಳಿಂದ ಅರಕೆರೆಯ ಶಂಕರದೇವರಿಗೆ ಭೂದಾನ.
೧೧೨೫	EI XIII p 298-316	ದಂಡನಾಯಕ ಸಿಂಗರಸನು ಕುಂದೂರಲ್ಲಿ ಕಟ್ಟಿಸಿದ ದೇವಾಲಯಕ್ಕೆ ಮಹಾಮಂಡಲೇಶ್ವರ ಎರಡನೆಯ ಜಯಕೇಶಿ ಮತ್ತು ಮೈಳಲದೇವಿಯರು ಬಿಟ್ಟ ಭೂದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
೧೪	೩೭	ನಿಗದಿ	೧೯೨೫–೨೬	೪೬೬	ಕಲ್ಮೇಶ್ವರಗುಡಿ ಎದುರು	ಕ.ಚಾ; ವಿಕ್ರಮಾದಿತ್ಯ VI
೧೫	೩೮	ಬಮ್ಮರಸಿ ಕೊಪ್ಪ	೧೯೨೫–೨೬	೪೬೭	ಊರಲ್ಲಿ–ವೀರಗಲ್ಲು	–
೧೬	೩೯	ಬಾಡ	೧೯೨೫–೨೬	೪೩೬	ಶಿವದೇವಾಲಯದ ಹತ್ತಿರ	–
೧೭	೪೦	ಬೋಕ್ಯಾಪುರ	೧೯೨೫–೨೬	೪೪೩	ವೀರಭದ್ರದೇವರ ಗುಡಿ–ಎದುರು	ಗೋ.ಕ; ಪೆರ್ಮಾಡಿದೇವ
೧೮	೪೧	ಭಾವಿಹಾಳ	೧೯೨೫–೨೬	೪೪೪	ಮಲ್ಲಿಕಾರ್ಜುನ ದೇವಾಲಯ ಎದುರು	ಗೋ.ಕ; ಜಯಕೇಶಿ II
೧೯	೪೨	ಮದನಭಾವಿ	೧೯೨೫–೨೬	೪೫೦	ರಾಮಲಿಂಗ ಗುಡಿ ಎದುರು	ಗೋ.ಕ; II ಜಯಕೇಶಿ
೨೦	೪೩	ಮನಗುಂಡಿ	೧೯೨೫--೨೬	೪೩೭	ಹಾಳಾದ ಸಿದ್ಧಲಿಂಗೇಶ್ವರ ಗುಡಿ ಹತ್ತಿರ (ಈಗ KRI ದಲ್ಲಿದೆ.)	ಕ.ಚಾ; ಸೋಮೇಶ್ವರ IV
	೪೪	ಮನಗುಂಡಿ	೧೯೨೫–೨೬	೪೩೮	ದುರ್ಗಾದೇವಾಲಯದ ಹತ್ತಿರ (ಈಗ KRIದಲ್ಲಿದೆ.)	ಕ.ಚಾ ಸೋಮೇಶ್ವರ IV ಗೋ.ಕ. ಜಯಕೇಶಿ III ಗೋ.ಕ.ವಜ್ರದೇವ
	೪೫	ಮನಗುಂಡಿ	೧೯೨೫–೨೬	೪೩೯	ಊರ ಪಶ್ಚಿಮದ ಕಲ್ಲಪ್ಪನ ಹಕ್ಕಲು (ಈಗ KRI ದಲ್ಲಿದೆ).	ಗೋ.ಕ ಜಯಕೇಶಿ III ಗೋ.ಕ.ವಜ್ರದೇವ
	೪೬	ಮನಗುಂಡಿ	೧೯೨೫–೨೬	೪೪೦	ಸಿದ್ಧಲಿಂಗನ ಹಕ್ಕಲು–ಮಾಸ್ತಿಕಲ್ಲು	–

ಮಿತಿ	ಪ್ರಕಟನೆ	ವಿಷಯ
೧೧೧೧	SII XI-ii 160	ಚಾವುಂಡಗಾವುಂಡನಿಂದ ಮೂಲಸ್ಥಾನದೇವರ ಪ್ರತಿಷ್ಠಾಪನೆಗಾಗಿ ತೇಜೋರಾಶಿಪಂಡಿತರಿಗೆ ಭೂದಾನ.
ಸು.ಶ; ೧೩	–	ಅತಿತ್ರುಟಿತ.
ಸು.ಶ;೧೨	SII XV 551	ತ್ರುಟಿತ, ಈಶ್ವರ ಮತ್ತು ಕೇಶವದೇವರಿಗೆ ಭೂದಾನ.
೧೧೬೩	SII XV 230	ಅರಸನಿಂದ ಅರಸಿಂಗೆರೆಯ ಸ್ವಯಂಭೂ ದೇವರಿಗೆ ಭೂಮಿ ಹಾಗೂ ಗೃಹದಾನ.
೧೧೨೫	SII XV 9	ಕುಂದೂರನಾಡಿನ ಅಧಿಕಾರಿಗಳಿಂದ ಹಲ್ಗುಂಡಿಯ ಮಲ್ಲಿಕಾರ್ಜುನದೇವರಿಗೆ ಭೂಮಿ ಮತ್ತು ಗೃಹದಾನ,
೧೧೩೪-೩೮	SII XV 16	ಜಯಕೇಶಿ ಅರಸನಿಂದ ಮಂದೂರ ಸ್ವಯಂಭೂ ಕಲಿದೇವರಿಗೆ ದಾನ.
೧೨೦೩, ೧೧೫ ಮತ್ತು ೧೨೬	SII XV 233	ವಿವಿಧ ಜನರು ಶಿವದೇವಾಲಯಕ್ಕಾಗಿ ಚಂದ್ರಭೂಷಣದೇವರಿಗೆ ನೀಡಿದ ದಾನ.
	KK p 404-17 KI V 32	
೧೨೦೭ ೧೨೧೮	KK p 401-3	ಎಂಟುಹಿಟ್ಟು ಮತ್ತು ಪಂಚಮಠರ ಸಮ್ಮುಖದಲ್ಲಿ ಸಿದ್ಧೇಶ್ವರದೇವರಿಗೆ ಐನೂರನಾಲ್ವರಿಂದ ಸುಂಕಗಳ ದಾನ. ಮಹಾಜನರಿಂದ ಭೋಜಗೇಶ್ವರದೇವರಿಗೆ ಭೂದಾನ.
೧೨೧೫,೧೭,೨೧ ಮತ್ತು ೧೨೦೩	KI V 68 KK p 418-27	ಬಸದಿಗೆ ಅನೇಕ ದಾನಗಳನ್ನು ಬಿಟ್ಟ ಉಲ್ಲೇಖ.
೧೩೮೪	SII XV 651	ನಾಡಪ್ರಭು ಮಲ್ಲಪ್ಪನ ಮರಣ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
೨೧	೪೭	ಮುಗದ	೧೯೨೫-೨೬	೪೫೯	ಜೈನಬಸದಿ	ಕ.ಚಾ; ಸೋಮೇಶ್ವರ I
	೪೮	ಮುಗದ	೧೯೨೫-೨೬	೪೫೬	ಕೆರೆಯ ಏರಿ	ಕ.ಚಾ. ವಿಕ್ರಮಾದಿತ್ಯ VI
	೪೯	ಮುಗದ	೧೯೨೫-೨೬	೪೫೮	ಕೆರೆಯ ಏರಿ	ಕ.ಚಾ; ವಿಕ್ರಮಾದಿತ್ಯ VI
	೫೦	ಮುಗದ	೧೯೨೫-೨೬	೪೫೭	ಕೆರೆಯ ಏರಿ-ವೀರಗಲ್ಲು	–
	೫೧	ಮುಗದ	–	–	ಹೆಗ್ಗೆರೆಯ ದಿಬ್ಬದ ಮೇಲಿನ ಈಶ್ವರಗುಡಿ-ವೀರಗಲ್ಲು	–
	೫೨	ಮುಗದ	–	–	ಬಸದಿ-ಪಾರ್ಶ್ವನಾಥ ಪಾದಪೀಠ	–
೨೨	೫೩	ಮುಮ್ಮಿಗಟ್ಟಿ	–	–	ಕಲ್ಮೇಶ್ವರ ದೇವಾಲಯ	ಕ.ಚಾ; ವಿಕ್ರಮಾದಿತ್ಯ VI
೨೩	೫೪	ರಾಯಾಪುರ	RNG.T	–	ಬಸಯ್ಯಾ ಮಲ್ಲಯ್ಯಾ ಮಠಪತಿಯವರಿಂದ ತಂದ ತಾಮ್ರಪಟ	ಕಲ; ಅಹವಮಲ್ಲ ಗೋ.ಕ. ಪೆರ್ಮಾಡಿದೇವ
೨೪	೫೫	ವೆಂಕಟಾಪುರ	೧೯೨೫-೨೬	೪೫೪	ಗುಡಿ-ಎದುರು	ಗೋ.ಕ; ಜಯಕೇಶಿ II
೨೫	೫೬	ಸಿಂಗನಹಳ್ಳಿ	೧೯೨೫-೨೬	೪೫೨	ಕಲ್ಮೇಶ್ವರ ಗುಡಿ ಎದುರು	ಗೋ.ಕ. ಜಯಕೇಶಿ II

ಮಿತಿ	ಪ್ರಕಟನೆ	ವಿಷಯ
೧೦೪೫	SII XI-i 78	ಮುಗುಂದ ಮೂವತ್ತರ ನಾಱ್ಗಾವುಂಡರ ಸಾಮಂತ ಮಾರ್ತಂಡನಿಂದ ಸಮ್ಯಕ್ತ್ವ ರತ್ನಾಕರ ಬಸದಿಯ ಜೀರ್ಣೋದ್ಧಾರ ಹಾಗೂ ನಾಟಕ ಶಾಲೆಯ ನಿರ್ಮಾಣ
–	SII XI-ii 211	ಮಹಾಮಂಡಲೇಶ್ವರ ಗೋವಲದೇವನ ಸಾಮಂತನ ವಂಶಾವಳಿ ಮತ್ತು ಚಾವುಂಡಾದಿಗಳ ಉಲ್ಲೇಖ
೧೧೨೫	SII XI-ii 177	ಮುಗುಂದ ಮೂವತ್ತರ ನಾರ್ಗಾವುಂಡರ ಸಾಮಂತ ನಾಕರಸನ ವಂಶಾವಳಿ ಹಾಗೂ ಬಮ್ಮರಸನಿಂದ ಕೆರೆಗೆ ಭೂದಾನ.
ಸು.ಶ;೧೨	SII XV 553	ಅಸ್ಪಷ್ಟ ಗೋಗ್ರಹಣ ಪ್ರಸಂಗದಲ್ಲಿ ವೀರನೊಬ್ಬನ ಮರಣ.
ಸು.ಶ;೧೨	–	ತ್ರುಟಿತ
ಸು.ಶ;೧೨	–	ತ್ರುಟಿತ
೧೨೨೪	EI XVII p 117-20	ಉದಯಗಾವುಂಡನಿಂದ ಕಲಿದೇವಸ್ವಾಮಿ ದೇವಾಲಯಕ್ಕೆ ಭೂದಾನ.
೧೧೮೨	–	ಅಹಮಮಲ್ಲ ಅರಸನಿಂದ ಉಪ್ಪವಳ್ಳಿಯ ಬ್ರಾಹ್ಮಣರಿಗೆ ಬೆಲ್ಲವೂರ ಗ್ರಾಮದಾನ
೧೧೩೬	SII XV 227	ಅತಿತ್ರುಟಿತ, ಜಯಕೇಶಿ ಮತ್ತು ರಾಣಿ ಮೈಳಲದೇವಿಯರಿಂದ ದಾನ.
೧೧೨೩-೨೪	SII XV 7	ಅತಿತ್ರುಟಿತ, ಬ್ರಹ್ಮಸಭೆಯ ಉಲ್ಲೇಖ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೫೭	ಸಿಂಗನಹಳ್ಳಿ	೧೯೨೫–೨೬	೪೫೩	ಕಲ್ಮೇಶ್ವರ ಗುಡಿ ಎದುರು	ಗೋ.ಕ. ಜಯಕೇಶಿ II
೨೬	೫೮	ಸಿದ್ದಾಪುರ	೧೯೨೫–೨೬	೪೬೦	ಹನುಮಂತದೇವರ ಗುಡಿ–ಎದುರು	–
೫೯		ಸಿದ್ದಾಪುರ	೧೯೨೫–೨೬	೪೬೧	ಶಿವಮಂಟಪ ಎದುರು	ಗೋ.ಕ. ಜಯಕೇಶಿ II
	೬೦	ಸಿದ್ದಾಪುರ	೧೯೨೫–೨೬	೪೬೪	ಸಿದ್ಧೇಶ್ವರ ಗುಡಿ ಎದುರು	ಗೋ.ಕ. ಪೆರ್ಮಾಡಿದೇವ
	೬೧	ಸಿದ್ದಾಪುರ	೧೯೨೫–೨೬	೪೬೨	ಶಿವಮಂಟಪ ಭಗವತಿ ಪಾದಪೀಠ	–
	೬೨	ಸಿದ್ದಾಪುರ	೧೯೨೫–೨೬	೪೬೩	ಶಿವಮಂಟಪ–ಗಣೇಶ ಪಾದಪೀಠ	–
೨೭	೬೩	ಹಿರೇಮಾಗನೂರ	೧೯೫೬–೫೭	೨೧೯	ಕಲ್ಲೇಶ್ವರ ದೇವಾಲಯ –ಎದುರು ಕಂಬ	–
೨೮	೬೪	ಹೆಬ್ಬಳ್ಳಿ	RNGC	–	ಶಂಭುಲಿಂಗ ದೇವಾಲಯ	ಯಾ;(ಸಿಂಘಣ)
	೬೫	ಹೆಬ್ಬಳ್ಳಿ	–	–	ಶಂಭುಲಿಂಗ ದೇವಾಲಯ–ಮಹಾದ್ವಾರ	ಯಾ; ಕನ್ನರದೇವ
	೬೬	ಹೆಬ್ಬಳ್ಳಿ	–	–	ಶಂಭುಲಿಂಗ ದೇವಾಲಯ ಹತ್ತಿರ	–

ಮಿತಿ	ಪ್ರಕಟನೆ	ವಿಷಯ
೧೧೩೬	–	ಜಯಕೇಶಿಯಿಂದ ಸೋಮನಾಥ ದೇವರಿಗೆ ಭೂದಾನ.
೧೧೨೦	SII XI-ii 194	ಪೊಸವೊಳಲದ ಮೂಲಸ್ಥಾನದೇವರಿಗೆ ಭೂಮಿ ಮತ್ತು ಹಣ ದಾನ.
೧೧೩೫	SII XV 14	ಪೊಸವೊಳಲದ ಮೂಲಸ್ಥಾನದೇವರಿಗೆ ಹಳ್ಳಗಾವುಂಡನಿಂದ ದಾನ.
೧೧೫೮	SII XV 229	ಹೊಸವೊಳಲದ ತೋಂಟಿಗರು ಹಾಗು ಪ್ರಜೆಗಳಿಂದ ಪಂಚಲಿಂಗೇಶ್ವರ ದೇವಾಲಯದ
ಸು.ಶ;೧೨	IA XI p 273-74	ಜೀರ್ಣೋದ್ಧಾರಕ್ಕೆ ಭೂದಾನ.
ಸು.ಶ;೧೨	SII XV 554	ಭಗವತಿದೇವಿಯ ವಿಗ್ರಹ ಸ್ಥಾಪನೆ.
ಸು.ಶ;೧೦	SII XV 555	ಅಸ್ಪಷ್ಟ.
ಸು.ಶ;೧೦	–	ಭೀಮನೆಂಬವನು ದೇವಾಲಯ ಕಟ್ಟಿಸಿದ ಉಲ್ಲೇಖ.
೧೨೪೪	–	ತ್ರುಟಿತ, ತುಣುಕು; ಸುಂಕಾಧಿಕಾರಿಯಿಂದ ದೇವರಿಗೆ ದಾನ.
೧೨೪೮	–	ಮಹಾಪ್ರಧಾನ ಬೀಚಿಸೆಟ್ಟಿಯ ಆದೇಶದ ಮೇರೆಗೆ ಸರ್ವಾಧಿಕಾರಿ ಅಳಿಯ ಮಲ್ಲಿಸೆಟ್ಟಿ, ಬ್ರಹ್ಮಪುರಿಯ ಬ್ರಾಹ್ಮಣರಿಗೆ ಬಿಟ್ಟ ಭೂದಾನ.
ಸು.ಶ;೧೩	–	ತ್ರುಟಿತ, ಯಾಪನೀಯ ಸಂಘ, ಪುನ್ನಾಗವೃಕ್ಷಮೂಲ ಗಣ ಎಂಬ ಉಲ್ಲೇಖ. ಮೊರಬ ಗ್ರಾಮ ದತ್ತಿ.

ಹುಬ್ಬಳ್ಳಿ ತಾಲೂಕ

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
೧	೧	ಅದರಗುಂಚಿ	೧೯೪೧-೪೨	೧	ಹನುಮಂತ ದೇವಾಲಯ -ವೀರಗಲ್ಲು	–
	೨	ಅದರಗುಂಚಿ	೧೯೪೧-೪೨	೩	ಸ.ನಂ. ೫೭	–
	೩	ಅದರಗುಂಚಿ	೧೯೪೧-೪೨	೨	ಹನುಮಂತ ದೇವಾಲಯ ವೀರಗಲ್ಲು	–
೨	೪	ಅಮರಗೋಳ	೧೯೪೧-೪೨	೭	ಬನಶಂಕರಿ ದೇವಾಲಯ	ಕ.ಚಾ; ವಿಕ್ರಮಾದಿತ್ಯ VI
೩						
	೫	ಅಹೋಬಳಪುರ	೧೯೪೧-೪೨	೪	ಗೋರಿಯ ಮೇಲೆ	–
	೬	ಅಹೋಬಳಪುರ	೧೯೪೧-೪೨	೫	ಗೋರಿಯ ಮೇಲೆ	–
	೭	ಅಹೋಬಳಪುರ	೧೯೪೧-೪೨	೬	ಗೋರಿಯ ಮೇಲೆ	–
೪	೮	ಇಂಗಳಳ್ಳಿ	೧೯೪೧-೪೨	೮೪	ಊರ ಚಾವಡಿಯ ಹತ್ತಿರ	–
	೯	ಇಂಗಳಳ್ಳಿ	೧೯೪೧-೪೨	೮೩	ಊರ ಅಗಸಿಯ ಹತ್ತಿರ	ಕ.ಚಾ; ತ್ರೈಲೋಕ್ಯಮಲ್ಲ
೫	೧೦	ಉಣಕಲ್ಲ	೧೯೪೧-೪೨	೫೮	ಹನುಮಂತ ದೇವಾಲಯ- ಪಾದಪೀಠ	–
					ನಂದಿಕಂಬ	ಯಾ; ರಮಚಂದ್ರ

ಮಿತಿ	ಪ್ರಕಟನೆ	ವಿಷಯ
ಸು.ಶ;೧೦	–	ತ್ರುಟಿತ ವೀರಗಲ್ಲು ನಿಲ್ಲಿಸಿದ ಉಲ್ಲೇಖ
ಸು.ಶ;೧೨	–	ತ್ರುಟಿತ, ಯಾಪನೀಯ ಸಂಘ, ಕಾನೂರ ಗಣಕ್ಕೆ ಸಂಬಂಧಿಸಿದ ಉಚ್ಚಂಗಿ ಬಸದಿಯ ಹೊಲದ ಉಲ್ಲೇಖ
ಸು. ಶ; ೧೪	–	ತ್ರುಟಿತ, ಗಾವುಂಡನೊಬ್ಬನ ಉಲ್ಲೇಖ.
೧೧೨೦	–	ಸೌದೊರೆ ಜಕ್ಕರಸನಿಂದ ಹಲಸಿಗೆನಾಡಿನ ಉಣಕಲ್ಲ ಕಂಪಣದ ಅಂಬರಗೊಳದಲ್ಲಿ ಕೇಶವ, ಭೈರದೇವರ ಪ್ರತಿಷ್ಠಾಪನೆ.
೧೮೧೮	–	ಇಂಗ್ಲೀಷ ಭಾಷೆ, ಹುಬ್ಬಳ್ಳಿ ಯಲ್ಲಿ ಹಬ್ಬಿದ್ದ ಕಾಲರಾ ಬೇನೆಯಲ್ಲಿ ಕ್ಯಾಪ್ಟನ್ ಜೇಮ್ಸಕುಕ್‌ನ ಮರಣ.
೧೮೧೮	–	ಕಾಲರಾ ಬೇನೆಯಿಂದ ಜಾರ್ಜ ಬಾಯಿಡ್ ಕಲರ್‌ನ ಮರಣ.
೧೮೧೮	–	ನಾನ್ ಕಮೀಶನ್ಡ ಆಫೀಸರನ ಮರಣ.
ಸು.ಶ;೧೦	–	ತ್ರುಟಿತ, ಅಸ್ಪಷ್ಟ.
–	–	ತ್ರುಟಿತ ಅಸ್ಪಷ್ಟ.
ಸು.ಶ;೧೨	–	ವಾಮದೇವ ಪಂಡಿತನಿಂದ ಉಗುರೇಶ್ವರದ ಕೇಶವ ದೇವರ ಸ್ಥಾಪನೆ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೧೧	ಉಣಕಲ್ಲ	೧೯೪೧–೪೨	೫೭	ಚಾವಡಿಯ ಹತ್ತಿರ	–
೬	೧೨	ಕಟ್ನೂರ	೧೯೪೧–೪೨	೪೩	ಸ.ನಂ. ೧೪	–
	೧೩	ಕಟ್ನೂರ	೧೯೪೧–೪೨	೪೧	ಕಲ್ಮೇಶ್ವರ ಗುಡಿ ಕಂಬ	ಗೋ.ಕ. ತ್ರಿಭುವನಮಲ್ಲ
	೧೪	ಕಟ್ನೂರ	೧೯೪೧–೪೨	೪೨	ಹಾಳಗುಡಿ–	
	೧೫	ಕಟ್ನೂರ	೧೯೪೧–೪೨	೪೪	ಸ.ನಂ. ೪	–
೭	೧೬	ಕಿರಸೂರ	೧೯೫೨–೫೩	೮೫	ಕಲ್ಮೇಶ್ವರ ಗುಡಿ–ತೊಲೆ	–
೮	೧೭	ಕುರಡಿಕೇರಿ	RNG.C	–	ಈಶ್ವರದೇವಾಲಯ –ದಕ್ಷಿಣ ಗೋಡೆ	ಕ.ಚಾ. ವಿಕ್ರಮಾದಿತ್ಯ VI
	೧೮	ಕುರಡಿಕೇರಿ	RNG.T	–	ಕೆರೆಯ ಹತ್ತಿರದ ದಿಬ್ಬ	ಗೋ.ಕ. ಜಯಕೇಶಿ
೯	೧೯	ಕೋಳಿವಾಡ	೧೯೫೨–೫೩	೮೯	ಕಲ್ಮೇಶ್ವರ ಗುಡಿ ಆವರಣ	ರಾ; ಖೋಟ್ಟಿಗ
	೨೦	ಕೋಳಿವಾಡ	೧೯೫೨–೫೩	೮೮	ಕಲ್ಮೇಶ್ವರ ಗುಡಿ ಆವರಣ –ವೀರಗಲ್ಲು	–
	೨೧	ಕೋಳಿವಾಡ	೧೯೫೨–೫೩	೯೦	ಕಲ್ಮೇಶ್ವರ ಗುಡಿ ಆವರಣ	–

ಮಿತಿ	ಪ್ರಕಟನೆ	ವಿಷಯ
–	–	ತ್ರುಟಿತ, ಅಸ್ಪಷ್ಟ; ಮಲ್ಲಿದೇವನ ಉಲ್ಲೇಖ.
ಸು.ಶ; ೯	–	ಕಟ್ಟನೂರ ಗೋಗ್ರಹಣದಲ್ಲಿ ಕಟ್ಟಳಿತಾಣಗನ ಮರಣ.
–	–	ಕಟ್ಟನೂರ ಮೂಲಸ್ಥಾನದೇವರಿಗೆ ಇಂದೆಯ ಸಾಹಣಿಯಿಂದ ಭೂದಾನ.
–	–	ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನನಿಗೆ ಬಿಟ್ಟದಾನ.
ಸು.ಶ;೧೬	–	ಬುಡರಸಿಂಗಿ ಹನುಮಂತದೇವರ ಹೊಲದ ಉಲ್ಲೇಖ.
೧೬೨೩	–	ಸುಂಕನಗೌಡನ ಮಗ ಲಿಂಗನಗೌಡನಿಂದ ಬಾಗಿಲ ನಿರ್ಮಾಣ.
೧೦೦೮	–	ದಂಡನಾಯಕ ಅನಂತಪಾಳನ ಸುಂಕಾಧಿಕಾರಿ ನಾರಣದೇವನಿಂದ ಭೋಜಂಗೇಶ್ವರ ದೇವಾಲಯಕ್ಕೆ ಸುಂಕದಾನ.
೧೧೨೬	–	ತ್ರುಟಿತ, ಜಯಕೇಶಿದೇವನ ಪಟ್ಟಮಹಿಷಿ ಮೈಳಲದೇವಿಯಿಂದ ಕುಡಿಯೇಶ್ವರ ದೇವರಿಗೆ ಸುಂಕದಾನ.
-	KI V 5	ತುಣುಕು, ಗಂಗವಂಶದ ಸತ್ಯವಾಕ್ಯ ಕೊಂಗುಣಿವರ್ಮಧರ್ಮಮಹಾರಾಜನ ಉಲ್ಲೇಖ.
ಸು.ಶ;೧೨	–	ತ್ರುಟಿತ, ಅಸ್ಪಷ್ಟ.
ಸು.ಶ;೧೨	KI V 91	"ಇನ್ನೂರ್ವ್ವರ ಧರ್ಮ್ಮ ಕೋಳಿವಾಡದ ಸೋವರಾಸಿ ಮಾಡಿಸಿದ ಊರೊಡೆಯರ ಧರ್ಮ್ಮ"

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೨೨	ಕೋಳಿವಾಡ	೧೯೫೨–೫೩	೯೧	ಕಲ್ಮೇಶ್ವರ ಗುಡಿ ಆವರಣ ತಾರಾಭಗವತಿ ಪಾದಪೀಠ	–
	೨೩	ಕೋಳಿವಾಡ	೧೯೫೨–೫೩	೮೬	ಚಾವಡಿ ಹತ್ತಿರ	–
೯	೨೪	ಕೋಳೀವಾಡ	೧೯೫೨–೫೩	೮೭	ನಾರಾಯಣ ದೇವರ ಗುಡಿ ಎದುರು–ಕಂಬ	–
೧೦	೨೫	ಗಬ್ಬೂರ	೧೯೪೧–೪೨	೨೮	ಹನುಮಂತ ದೇವರಗುಡಿ ವೀರಗಲ್ಲು	–
	೨೬	ಗಬ್ಬೂರ	೧೯೪೧–೪೨	೨೭	ಹನುಮಂತ ದೇವರಗುಡಿ ವೀರಗಲ್ಲು	ರಾ; ಕೃಷ್ಣ III
	೨೭	ಗಬ್ಬೂರ	೧೯೪೧–೪೨	೩೦	ಛಬ್ಬಿಯವರ ಹೊಲ	–
	೨೮	ಗಬ್ಬೂರ	೧೯೪೧–೪೨	೨೯	ಬನಶಂಕರಿ ಗುಡಿ ಗೋಡೆ	–
೧೧	೨೯	ಛಬ್ಬಿ	೧೯೪೧–೪೨	೧೬	ಹುಡೇದ ಬಾವಿ ಕಂಬ	ಬಾ. ಚಾ; ವಿಜಯಾದಿತ್ಯ
	೩೦	ಛಬ್ಬಿ	೧೯೪೧–೪೨	೧೫	ಹುಡೇದ ಬಾವಿ	

ಮಿತಿ	ಪ್ರಕಟನೆ	ವಿಷಯ
ಸು.ಶ;೧೨-೧೩	KI V 107	ಆರ್ಯತಾರಾಭಗವತಿಯ ಪ್ರಾರ್ಥನೆ.
೧೪೫೮	–	ತ್ರುಟಿತ, ಅಸ್ಪಷ್ಟ; ಮಹಾದೇವರಿಗೆ ನೀಡಿದ ದತ್ತಿ.
೧೫೬೩	KI V 123	ಸೂರಪಯ್ಯನು ಮಾಧವಜನಾರ್ಧನ ದೇವಾಲಯದ ಸೇವೆಗೆ ತಿರುಮಲಬೋಪನ ಮಗಳಾದ ಸೂರಿಯ ಮಾಣಿಕೆಯನ್ನು ದಾನನೀಡಿದ ಉಲ್ಲೇಖ.
೯೦೯	–	ತ್ರುಟಿತ, ಗೊಬ್ಬನೂರಲ್ಲಿ ಕೊಂತದ ನಾಗನ ಮರಣ.
–	–	ತ್ರುಟಿತ, ಗೋಗ್ರಹಣ ಪ್ರಸಂಗದಲ್ಲಿ ಸಿರಿವೆಗೆ ಎಂಬವನ ಮರಣ.
ಸು.ಶ;೧೨	–	'ಶ್ರೀ ತಿಮ್ಮ ಸಮುದ್ರ' ಎಂಬ ಉಲ್ಲೇಖ.
–	–	ತ್ರುಟಿತ.
–	–	ತ್ರುಟಿತ, ಅಸ್ಪಷ್ಟ.
೧೦೬೧	–	ಸಬ್ಬಿಯ ಧೋರಜಿನಲಯದ ಕನಕನಂದಿಯ ನಿಷಧಿ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೩೧	ಛಬ್ಬಿ	೧೯೪೧-೪೨	೧೯	ಕರಿಮಲ್ಲೇಶ್ವರ ದೇವಾಲಯ ಗೋಡೆ ವೀರಗಲ್ಲು	ಕ.ಚಾ;
	೩೨	ಛಬ್ಬಿ	೧೯೪೧-೪೨	೨೧	ಬಸದಿ ವಿಗ್ರಹ ಪಾದಪೀಠ	–
	೩೩	ಛಬ್ಬಿ	೧೯೪೧-೪೨	೨೫	ನಂದಿಕಂಬ	ಹಾ.ಕ; ಕಾಮದೇವ
	೩೪	ಛಬ್ಬಿ	೧೯೪೧-೪೨	೨೪	ತಳವಾರ ಹೊಲ	ಯಾ; ಮಹಾದೇವ
	೩೫	ಛಬ್ಬಿ	೧೯೪೧-೪೨	೨೩	ಕಾಳಮ್ಮ ದೇವಾಲಯ	–
	೩೬	ಛಬ್ಬಿ	೧೯೪೧-೪೨	೨೦	ನಾರಾಯಣ ದೇವಾಲಯ-ಬಾವಿ	–
	೩೭	ಛಬ್ಬಿ	೧೯೪೧-೪೨	೧೭	ಹುಡೇದ ಹತ್ತಿರ ವೀರಗಲ್ಲು	–
	೩೮	ಛಬ್ಬಿ	೧೯೪೧-೪೨	೨೨	ಶಂಕದ ಚನ್ನಪ್ಪನ ಮನೆಯ ಹಿತ್ತಲು-ವೀರಭದ್ರ ಮೂರ್ತಿ	–
	೩೯	ಛಬ್ಬಿ	೧೯೪೧-೪೨	೧೮	ಹುಡೇದ ಹತ್ತಿರ ವೀರಗಲ್ಲು	–
೧೨	೪೦	ದೇವರಗುಡಿಹಾಳ	೧೯೪೧-೪೨	೨೬	ಊರ ಸಮೀಪದ ದಾರಿಯಲ್ಲಿ	–
೧೩	೪೧	ನೂಲ್ವಿ	೧೯೪೧-೪೨	೫೧	ಸ.ನಂ. ೨೧೭	ಕ.ಚಾ; ಸೋಮೇಶ್ವರ II

ಮಿತಿ	ಪ್ರಕಟನೆ	ವಿಷಯ
–	–	ತ್ರುಟಿತ, ತಳವರ ಸಾಸಣಿಗ ಮಲ್ಲನಾಯಕನ ಉಲ್ಲೇಖ.
ಸು.ಶ; ೧೨	–	ಅಸ್ಪಷ್ಟ, ಮೂರ್ತಿ ಸ್ಥಾಪನೆಯ ವಿಷಯ.
–	–	ತ್ರುಟಿತ, ಶಿವಮುದ್ದುದೇವನ ಶಿಷ್ಯ ಹಾಗೂ ಕಾಲಡಿಯ ಧವಳೇಶ್ವರದೇವರ ಅರ್ಚಕನಾದ ರಾಜಗುರು ಲಕ್ಷ್ಮೀದೇವನಿಗೆ ಬಿಟ್ಟ ದಾನ
೧೨೬೪	–	ತಳಪದ ಆಚರಸಾದಿಗಳಿಂದ ಭೂದಾನ.
ಸು.ಶ; ೧೫	–	ತ್ರುಟಿತ, ಅಸ್ಪಷ್ಟ.
ಸು.ಶ; ೧೫	–	ಚಬ್ಬಿಯ ತಿಮ್ಮಗೌಡನ ಅಳಿಯ ಸೋಮಣ್ಣ ಹೆಗ್ಗಡೆಯ ಯುದ್ಧಮರಣ.
ಸು.ಶ; ೧೫	–	ತ್ರುಟಿತ, ಅಸ್ಪಷ್ಟ.
ಸು.ಶ; ೧೬	–	ಅಸ್ಪಷ್ಟ.
–	–	ಅಸ್ಪಷ್ಟ.
ಸು.ಶ; ೧೭	–	ಘಂಟರಾವುತನಿಂದ ಮಲ್ಲಿಕಾರ್ಜುನ ದೇವಾಲಯಕ್ಕೆ ಭೂದಾನ.
೧೦೭೩	–	ನೂಲೆಯ ಹನ್ನೆರಡುಜನ ಗಾವುಂಡರಿಂದ ಆಚಾರ್ಯ ಸೋಮಕರ್ತಾರದೇವರಿಗೆ ದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ ನಂ.	ದೊರೆತ ಸ್ಥಳ	ಅರಸ
	೪೨	ನೂಲ್ವಿ	೧೯೪೧–೪೨ ೫೨	ಅದೇ ಕಲ್ಲು	ಗೋ.ಕ. ಪೆರ್ಮಾಡಿದೇವ
	೪೩	ನೂಲ್ವಿ	೧೯೪೧–೪೨ ೫೦	ಕೆರೆಯ ಹತ್ತಿರ ವೀರಗಲ್ಲು	–
	೪೪	ನೂಲ್ವಿ	೧೯೪೧–೪೨ ೫೩	ಸ.ನಂ. ೨೧೭	ಗೋ.ಕ. ಜಯಕೇಶಿ III
	೪೫	ನೂಲ್ವಿ	೧೯೪೧–೪೨ ೫೪	ಸ.ನಂ. ೨೧೭	ಗೋ.ಕ. ತ್ರಿಭುವನಮಲ್ಲ
	೪೬	ನೂಲ್ವಿ	೧೯೪೧–೪೨ ೪೯	ಮೊಕಾಸಿ ಬಲರಾಯನ ಮನೆ–ಗೋಡೆ	ಯಾ; ರಾಮಚಂದ್ರ
೧೪	೪೭	ಪರಸಾಪುರ	೧೯೪೧–೪೨ ೫೫	ಹನುಮಂತದೇವರ ಗುಡಿ	–
೧೫	೪೮	ಬುಡರಸಿಂಗಿ	೧೯೪೧–೪೨ ೧೪	ಹನುಮಂತದೇವರ ಗುಡಿ ಆವರಣ–ನಂದಿಕಲ್ಲು	ಗೋ.ಕ. ಚಟ್ಟಯದೇವ
೧೬	೪೯	ಬೆಳಗಲಿ	೧೯೪೧–೪೨ ೯	ಚಿಕ್ಕಮಠದ ಹತ್ತಿರ	ಕ.ಚಾ; ಜಯಸಿಂಹದೇವ
	೫೦	ಬೆಳಗಲಿ	೧೯೪೧–೪೨ ೧೦	ಊರ ಕೆರೆ–ವೀರಗಲ್ಲು	–
	೫೧	ಬೆಳಗಲಿ	೧೯೪೧–೪೨ ೧೧	ಕಲ್ಲಪ್ಪನ ಗುಡಿ	–
	೫೨	ಬೆಳಗಲಿ	೧೯೪೧–೪೨ ೮	ಚಿಕ್ಕಮಠದಹತ್ತಿರ–ವೀರಗಲ್ಲು	–

ಮಿತಿ	ಪ್ರಕಟನೆ	ವಿಷಯ
೧೧೮೬	–	ಕಾಳೇಶ್ವರಾರ್ಯನಿಗೆ ಬಿಟ್ಟ ದಾನ.
ಸು.ಶ;೧೨	–	ತ್ರುಟಿತ.
೧೨೦೦	–	ಒಕ್ಕಲಿಗರಿಂದ ನೈವೇದ್ಯಕ್ಕಾಗಿ ದಾನ.
೧೨೩೭	–	ಅರುವತ್ತು ಒಕ್ಕಲುಮಕ್ಕಳಿಂದ ದೇವರಾಶಿದೇವನಿಗೆ ದಾನ.
೧೨೯೪	–	ತ್ರುಟಿತ, ಹಲಸಿಗೆ–೧೨೦೦೦ ಹಾಗೂ ಭೂದಾನಗಳ ವಿಷಯ.
ಸು.ಶ;೧೬	–	ತ್ರುಟಿತ.
೧೨೫೮	EI XXX VI p 164-66	ಸೊನ್ನಲಿಗೆಯ ಕಪಿಲಸಿದ್ಧಮಲ್ಲಿಕಾರ್ಜುನನಿಗೆ ಹಲಸಿಗೆನಾಡಿನ ಸಬ್ಬಿಕಂಪಣದ ಉಚ್ಚಂಗಿ ಗ್ರಾಮದಾನ.
೧೦೪೨	–	ತ್ರುಟಿತ, ಸಬ್ಬಿನಾಡಿನಲ್ಲಿ ಕದಂಬ ಅರಸನೊಬ್ಬ ಕೆರೆ ಕಟ್ಟಿಸಿ ದಾನ ನೀಡಿದ ಉಲ್ಲೇಖ.
ಸು.ಶ;೧೨	–	ತ್ರುಟಿತ, ಗಾವುಂಡ ಹಾಗೂ ಹಿಟ್ಟುಗಳು, ಮರಣ ಹೊಂದಿದ ವೀರನಿಗೆ ನೀಡಿದ ದಾನ.
ಸು.ಶ;೧೨	–	ಸವೆದು ಹೋಗಿವೆ.
ಸು.ಶ;೧೩	–	ತ್ರುಟಿತ, ವ್ಯಕ್ತಿಯೊಬ್ಬನ ವೀರಮರಣ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
೧೭	೫೩	ಬ್ಯಾಹಟ್ಟಿ	RNG.C	–	ಕೆರೆಯ ದಂಡೆ	ಕ.ಚಾ; (ಜಯಸಿಂಹ II)
	೫೪	ಬ್ಯಾಹಟ್ಟಿ	೧೯೫೨–೫೩	೭೩	ಕಲ್ಮೇಶ್ವರ ದೇವಾಲಯ–ಗೋಡೆ	ಗೋ.ಕ. ಪೆರ್ಮಾಡಿದೇವ
	೫೫	ಬ್ಯಾಹಟ್ಟಿ	೧೯೫೨–೫೩	೭೪	ವೀರಭದ್ರ ದೇವಾಲಯ	–
	೫೬	ಬ್ಯಾಹಟ್ಟಿ	೧೯೫೨–೫೩	೭೫	ಹನುಮಂತ ದೇವರಗುಡಿ ಹತ್ತಿರ–ವೀರಗಲ್ಲು	–
೧೭	೫೭	ಬ್ಯಾಹಟ್ಟಿ	೧೯೫೨–೫೩	೮೦	ಹಿರೇಮಠದ ಹತ್ತಿರ	–
	೫೮	ಬ್ಯಾಹಟ್ಟಿ	೧೯೫೨–೫೩	೭೬	ಹಿರೇಮಠದ ಹತ್ತಿರ	ಹೊ; ವೀರಬಲ್ಲಾಳ II
	೫೯	ಬ್ಯಾಹಟ್ಟಿ	೧೯೫೨–೫೩	೭೯	ಹಿರೇಮಠದ ಹತ್ತಿರ	ಹೊ; ವೀರಬಲ್ಲಾಳ II
	೬೦	ಬ್ಯಾಹಟ್ಟಿ	೧೯೫೨–೫೩	೭೨	ಚಾವಡಿಯ ಹತ್ತಿರ	ಹೊ; ವೀರಬಲ್ಲಾಳ II
	೬೧	ಬ್ಯಾಹಟ್ಟಿ	೧೯೫೨–೫೩	೮೧	ತೋಟದಪ್ಪನ ಮಠ	ಯಾ; ಸಿಂಘಣ
	೬೨	ಬ್ಯಾಹಟ್ಟಿ	೧೯೫೨–೫೩	೭೭	ಹಿರೇಮಠದ ಹತ್ತಿರ	–
	೬೩	ಬ್ಯಾಹಟ್ಟಿ	೧೯೫೨–೫೩	೭೮	ಹಿರೇಮಠದ ಹತ್ತಿರ	–
	೬೪	ಬ್ಯಾಹಟ್ಟಿ	೧೯೫೨–೫೩	೮೨	ಟೋಪಣ್ಣನವರ ಹೊಲ	–

ಮಿತಿ	ಪ್ರಕಟನೆ	ವಿಷಯ
೧೦೩೭	–	ತುಣುಕು, ಅಸ್ಪಷ್ಟ; ಪಾವನರಸ ಮತ್ತು ಹನ್ನೆರಡು ಗಾವುಂಡರಿಂದ ಜಿನಾಲಯಕ್ಕೆ ತೆರಿಗೆ ದಾನ.
೧೧೬೬	–	ತ್ರುಟಿತ, ಅಸ್ಪಷ್ಟ; ಗ್ರಾಮೇಶ್ವರದೇವರಿಗೆ ಬಿಟ್ಟ ಭೂದಾನ
	–	ತ್ರುಟಿತ, ಅಸ್ಪಷ್ಟ.
ಸು.ಶ; ೧೨	–	ತುಣುಕು, ಅಸ್ಪಷ್ಟ; ಈಶ್ವರನೆಂಬುವನು ಗಾಮುಂಡನಾಗಿದ್ದ ಉಲ್ಲೇಖ.
ಸು.ಶ;೧೨	–	ತ್ರುಟಿತ, ಅಸ್ಪಷ್ಟ; ಬ್ರಾಹ್ಮಣರಿಗೆ ನೀಡಿದ ವೃತ್ತಿದಾನ.
೧೨೦೯	–	ತ್ರುಟಿತ, ಭೂದಾನ ನೀಡಿದ ಉಲ್ಲೇಖ
ಸು.ಶ;೧೨-೧೩	–	ತ್ರುಟಿತ, ಅಸ್ಪಷ್ಟ ಬ್ಯಾಹಟ್ಟಿಯ ಇಪ್ಪತ್ತುಜನ ಬ್ರಾಹ್ಮಣ ಪಂಡಿತರಿಗೆ ನೀಡಿದ ಭೂದಾನ.
–	–	ಅಪೂರ್ಣ, ಮಹಾಪ್ರಧಾನ ಸೇನಾಧಿಪತಿ, ಬಾಹತ್ತರ ನಿಯೋಗಾಧಿಪತಿ ಕುಮಾರಪಂಡಿತಯ್ಯನು ವೆಳುವಲಮುನೂರು ಆಳುತ್ತಿದ್ದ ಉಲ್ಲೇಖ.
೧೨೩೪	–	ತ್ರುಟಿತ, ಹೊನ್ನಬೊಮ್ಮಿಸೆಟ್ಟಿ ಹಾಗೂ ಚೌಡಿಸೆಟ್ಟಿಯರು ಬ್ರಾಹ್ಮಣರಿಗೆ ನೀಡಿದ ದಾನ.
ಸು.ಶ;೧೩	–	ಅಸ್ಪಷ್ಟ, ದಾನಬಿಟ್ಟ ಉಲ್ಲೇಖ.
ಸು.ಶ; ೧೪	–	ತ್ರುಟಿತ, ಪಂಚಾಕ್ಷರದೇವರ ಮಠಕ್ಕೆ ಬಿಟ್ಟ ದತ್ತಿ
ಈಚಿನ ಅಕ್ಷರ	–	ತ್ರುಟಿತ, ನಾಡಗೌಡ ಲಿಂಗಹರ ಒಡೆಯನಿಂದ ಗುರುವಿನ ಗದ್ದುಗೆಯ ನಿರ್ಮಾಣ ಹಾಗೂ ಬಸವಲಿಂಗ ದೇವರ ಮಠದ ಉಲ್ಲೇಖ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
೧೮	೬೫	ಭಂಡಿವಾಡ	೧೯೫೨–೫೩	೭೧	ಮಲ್ಲಿಕಾರ್ಜುನ ದೇವಾಲಯ ಹತ್ತಿರ	ಕ.ಚಾ; (ತ್ರೈಲೋಕ್ಯಮಲ್ಲ)
೧೯	೬೬	ಭೈರಿದೇವಿಕೊಪ್ಪ	೧೯೪೧–೪	೨೧೨	ಕೆರೆಯ ಹತ್ತಿರ ವೀರಗಲ್ಲು	–
	೬೭	ಭೈರಿದೇವಿಕೊಪ್ಪ	೧೯೪೧–೪	೨೧೩	ಸವದತ್ತಿಯವರ ಹೊಲ	–
೨೦	೬೮	ಮಜಿದಪುರ	೧೯೪೧–೪೨	೪೫	ಹೊಸಮಠ–ಗೋರಿ	–
	೬೯	ಮಜಿದಪುರ	೧೯೪೧–೪೨	೪೬	ಹೊಸಮಠ–ಗೋರಿ	–
೨೧	೭೦	ಮಂಟೂರ	೧೯೪೬–೪೭	೨೪೫	ವಲ್ಲಭೇಶ್ವರ ದೇವಾಲಯ–ಹಿಂದೆ	ಕ.ಚಾ; ಸೋಮೇಶ್ವರ II
	೭೧	ಮಂಟೂರ	೧೯೪೬–೪೭	೨೪೬	ಹನುಮಂತ ದೇವರ ಗುಡಿ	–
	೭೨	ಮಂಟೂರ	೧೯೫೨–೫೩	೯೪	ವಲ್ಲಭೇಶ್ವರ ದೇವಾಲಯ ಆವರಣ	–
	೭೩	ಮಂಟೂರ	೧೯೫೨–೫೩	೯೫	ವಲ್ಲಭೇಶ್ವರ ದೇವಾಲಯ ಆವರಣ ವೀರಗಲ್ಲು	
	೭೪	ಮಂಟೂರ	೧೯೪೬–೪೭	೨೪೪	ವಲ್ಲಭೇಶ್ವರ ದೇವಾಲಯ ಹೊರಗೆ	–
೨೨	೭೫	ಮರಿಯನ ತಿಮ್ಮಸಾಗರ	೧೯೪೧–೪೨	೪೭	ಕೋರಿಯವರ ಬಾವಿ	–

ಮಿತಿ	ಪ್ರಕಟನೆ	ವಿಷಯ
–	–	ಅಸ್ಪಷ್ಟ.
೧೪೩೮	–	ತುಣುಕು, ಸ್ವಯಂಭೂದೇವರ ಉಲ್ಲೇಖ.
ಸು.ಶ;೧೬	–	ತ್ರುಟಿತ, ತಿಮ್ಮರಸ ಒಡೆಯನು ಹನುಮಂತದೇವರಿಗಾಗಿ ಕರುಣಾಕರಯ್ಯನಿಗೆ ನೀಡಿದ ದಾನ.
ಈಚಿನ ಅಕ್ಷರ	–	ಮಹಜಿತಪುರದ ಬಸಪ್ಪ ಕಾಡಪ್ಪ ಶೆಟ್ಟರ ಸಮಾಧಿ.
ಈಚಿನ ಅಕ್ಷರ	–	ಪೊಸಪುಬ್ಬಳ್ಳಿಯ ಮಹಜಿತಪುರದ ಮುನಿಯಪ್ಪ ಬಸಪ್ಪ ಶೆಟ್ಟರ ಸಮಾಧಿ.
೧೦೭೨	–	ಮಹಾಮಂಡಳೇಶ್ವರ ಲಕ್ಷ್ಮರಸನು ಮಂಟೂರ ರುದ್ರಶಕ್ತಿ ಪಂಡಿತರಿಗೆ ನೀಡಿದ ಭೂದಾನ.
ಸು.ಶ;೧೧	–	ತ್ರುಟಿತ, ಕಲಿವಿಟ್ಟನ ವೀರಮರಣ
ಸು.ಶ;೧೨	–	ತ್ರುಟಿತ, ಅಸ್ಪಷ್ಟ.
ಸು.ಶ;೧೨	–	ತ್ರುಟಿತ, ಅಸ್ಪಷ್ಟ.
ಸು.ಶ;೧೨	–	ತ್ರುಟಿತ, ನಂದಿಭಟ್ಟಾರಕ ಮತ್ತು ನಾಗಚಂದ್ರ ಎಂಬ ಉಲ್ಲೇಖ.
೧೭೨೯	–	ಸತ್ಯಪೂರ್ಣತೀರ್ಥ ಗುರುವಿಗೆ ಶರಣು ಎಂಬ ಉಲ್ಲೇಖ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
೨೩	೭೬	ಮಲ್ಲಿಗವಾಡ	೧೯೫೨-೫೩	೯೨	ಶಿವದೇವಾಲಯ ಪಾದಪೀಠ	–
	೭೭	ಮಲ್ಲಿಗವಾಡ	೧೯೫೨-೫೩	೯೩	ಶಿವದೇವಾಲಯ ಹತ್ತಿರ	–
೨೪	೭೮	ಮುರಾರಹಳ್ಳಿ	೧೯೪೧-೪೨	೪೮	ಸ.ನಂ. ೧೮	–
೨೫	೭೯	ಯರಗುಪ್ಪಿ	೧೯೩೩-೩೪	೩೬	ನಾರಾಯಣ ಗುಡಿ –ಎಡಗೋಡೆ	ಕ.ಚಾ; ಸೋಮೇಶ್ವರ I
೨೬	೮೦	ವರೂರ	೧೯೪೧-೪೨	೫೯	ಹನುಮಂತದೇವರ ಗುಡಿ–ವೀರಗಲ್ಲು	–
೨೭	೮೧	ಶರೆವಾಡ	೧೯೪೧-೪೨	೫೬	ಸ.ನಂ. ೧೩೪	–
೨೮	೮೨	ಸಿರಗುಪ್ಪಿ	೧೯೩೩-೩೪	೩೨	ಹುಡೇದ ಹನುಮಂತ ದೇವರ ಗುಡಿ–ಹತ್ತಿರ	ಸೇಂದ್ರಕ; ವಾಣಸತ್ತಿ
	೮೩	ಸಿರಗುಪ್ಪಿ	೧೯೩೩-೩೪	೩೩	ಕಿಟ್ಟದ ಹನುಮಂತ ದೇವರ ಗುಡಿ –ಹಿಂದೆ	–
	೮೪	ಸಿರಗುಪ್ಪಿ	೧೯೩೩-೩೪	೩೫	ಊರ ಚಾವಡಿ	ಕ.ಚಾ; ವಿಕ್ರಮಾದಿತ್ಯ VI
	೮೫	ಸಿರಗುಪ್ಪಿ	೧೯೩೩-೩೪	೩೪	ಊರ ಚಾವಡಿ	–
	೮೬	ಸಿರಗುಪ್ಪಿ	೧೯೫೨-೫೩	೯೬	ಹುಡೇದ ಹನುಮಂತ ದೇವಾಲಯ ತೊಲೆ	ವಿ;ಕೃಷ್ಣದೇವರಾಯ
೨೯	೮೭	ಸುಳ್ಳ	೧೯೫೨-೫೩	೯೭	ತಟ್ಟಿಮನೆಯವರ ಮನೆ ಹತ್ತಿರ– ಪಾದಪೀಠ	ರಾ; ಅಮೋಘವರ್ಷ

ಮಿತಿ	ಪ್ರಕಟನೆ	ವಿಷಯ
ಸು.ಶ;೧೨	–	ತ್ರುಟಿತ, ಅಸ್ಪಷ್ಟ; ಗುರುವಿನ ವರ್ಣನೆ.
ಸು.ಶ;೧೨	KI V 102	ತ್ರುಟಿತ, ಅಸ್ಪಷ್ಟ; ಚಿಕ್ಕಗೇರಿಯ ಪಟ್ಟಗಾರ ಕುಲದ ಸೋಮಗವುಂಡನ ಉಲ್ಲೇಖ.
ಈಚಿನ ಅಕ್ಷರ	–	ಪೋಡವಿಡಿದೇವನ ಹೊಲದ ಉಲ್ಲೇಖ.
-	SII XVIII 68	ಯರಗುಪ್ಪಿಯ ಗಾವುಂಡರು ಹಾಗೂ ೬೦ ಒಕ್ಕಲಾದಿಗಳು ಅರಬಾವಿಗೆ ನೀಡಿದ ಭೂದಾನ.
–	–	ಎಲೆವಳೆಯ ಬಿಜ್ಜಯ ಮತ್ತು ಜಕ್ಕರಸರ ವೀರಮರಣ.
೧೫೩೯	–	ಕೇವಲ ಮಿತಿಯ ಉಲ್ಲೇಖ.
'ಸು.ಶ;೬–೭	SII XVIII-7	ಅರಸನ ಮಗನು ಸಿರಿಗುಪ್ಪೆಯನ್ನಾಳಿದ ಉಲ್ಲೇಖ.
'ಸು.ಶ;೮	SII XVIII-318	ಪರಶುರಾಮಲೆಂಕ ಮತ್ತು ಇಂದ್ರರ ಉಲ್ಲೇಖ.
೧೦೮೩	SII XVIII-90	ಅತಿತ್ರುಟಿತ, ನೂರು ಮಹಾಜನರ ಉಲ್ಲೇಖ.
ಸು.ಶ;೧೩	SII XVIII-394	ದಂಡನಾಯಕ ನಾಗರಸನಿಂದ ಬ್ರಹ್ಮಪುರಿಯ ನಿರ್ಮಾಣ.
ಸು.ಶ;೧೩	–	ಬಾಗಿಲ ತಿಮ್ಮಪ್ಪನಾಯಕನ ಅಧಿಕಾರಿ ತಿರುಮಲಪ್ಪನ ಪುಣ್ಯಾರ್ಥವಾಗಿ ಅಳಿಯ ಐರಾಪೀಳನು ದೇವಾಲಯ ಕಟ್ಟಿಸಿದ ಉಲ್ಲೇಖ.
–	–	ತ್ರುಟಿತ, ಅಸ್ಪಷ್ಟ; ಗುರುವಿನ ಪಾದುಕೆಗಳ ಪೂಜೆ ಮತ್ತು ಉಣಕಲ್ಲ–೩೦ ರ ಗಾವುಂಡನ ಉಲ್ಲೇಖ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೮೮	ಸುಳ್ಳ	೧೯೫೨–೫೩	೯೯	ಮುಲ್ಕಿ ಪಾಟೀಲರ ಮನೆ ಹತ್ತಿರ	–
೨೯	೮೯	ಸುಳ್ಳ	೧೯೫೨–೫೩	೧೦೦	ಹಿರೇಗೌಡರ ಮನೆಯ ಹತ್ತಿರ	–
	೯೦	ಸುಳ್ಳ	೧೯೫೨–೫೩	೧೦೧	ಹಿರೇಗೌಡರ ಮನೆಯ ಹತ್ತಿರ ಕಂಬ	–
	೯೧	ಸುಳ್ಳ	೧೯೫೨–೫೩	೯೮	ತೀರ್ಥಗೌಡರ ಮನೆಯ ಹತ್ತಿರ	–
೩೦	೯೨	ಹಳೆಹುಬ್ಬಳ್ಳಿ	೧೯೪೧–೪೨	೩೧	ಪ್ಯಾಟಿಯವರ ಬಾವಿ	ಕ.ಚಾ; ವಿಕ್ರಮಾದಿತ್ಯ I
	೯೩	ಹಳೆಹುಬ್ಬಳಿ	೧೯೪೧–೪೨	೩೩	ಬಸದಿ–ಬ್ರಹ್ಮದೇವ ಪಾದಪೀಠ	–
	೯೪	ಹಳೆಹುಬ್ಬಳಿ	೧೯೪೧–೪೨	೩೪	ಬಸದಿ–ಜೈನವಿಗ್ರಹ ಪಾದಪೀಠ	–
	೯೫	ಹಳೆಹುಬ್ಬಳಿ	೧೯೪೧–೪೨	೩೨	ವೆಂಕಟೇಶ ದೇಸಾಯಿಯವರ ಮನೆ–ಕಂಬ	–
	೯೬	ಹಳೆಹುಬ್ಬಳಿ	೧೯೪೧–೪೨	೩೫	ಬಸದಿಯ ಜಾಗಟೆ	–
೩೧	೯೭	ಹುಬ್ಬಳ್ಳಿ	೧೯೪೧–೪೨	೩೬	ಕಚೇರಿ–ಆವರಣ	ರಾ; ಅಮೋಘವರ್ಷ
	೯೮	ಹುಬ್ಬಳ್ಳಿ	೧೯೪೧–೪೨	೩೯	ಕಚೇರಿ–ಆವರಣ –ಕಂಬ	ರಾ; ನಿತ್ಯವರ್ಷ

ಮಿತಿ	ಪ್ರಕಟನೆ	ವಿಷಯ
೧೫೦೯	–	ತ್ರುಟಿತ, ತಿಮ್ಮಪ್ಪನಾಯಕ ಹಾಗೂ ಅರವಟ್ಟಿಗೆಯ ಉಲ್ಲೇಖ.
ಸು.ಶ; ೧೬	–	ಸುಳ್ಳದಲ್ಲಿ ತಿಮ್ಮಪ್ಪನಾಯಕನು ಅಗೆಯಿಸಿದ ಬಾವಿಗೆ ಬಿಟ್ಟ ದತ್ತಿ.
ಸು.ಶ; ೧೬	–	ತ್ರುಟಿತ, ಚಂದ್ರಭಟ್ಟನಿಗೆ ನೀಡಿದ ದಾನ.
	–	
ಸು.ಶ; ೧೨	–	ತ್ರುಟಿತ, ಸುಳ್ಳದ ಸಿರಿಯಪ್ಪಗೌಡಾದಿಗಳು ಅಮರಗೋಳಸೀಮೆಯಲ್ಲಿ ಅಗೆಯಿಸಿದ ಬಾವಿಗೆ ನೀಡಿದ ದಾನ.
–	–	ತ್ರುಟಿತ, ಅಸ್ಪಷ್ಟ; ಉಪಾಧ್ಯಾಯನೊಬ್ಬನ ಉಲ್ಲೇಖ.
ಸು.ಶ; ೧೭	–	ಅಸ್ಪಷ್ಟ, ಬ್ರಹ್ಮೇಶ್ವರ ಪ್ರತಿಮೆಯ ದಾನ.
ಸು.ಶ; ೧೩	–	ಯಾಪನೀಯ ಸಂಘ, ಕಾಡೂಣೂರ ಗಣದ ಉಲ್ಲೇಖ.
೧೬೦೧	–	ಹುಬ್ಬಳ್ಳಿ ಸೀಮೆ ಜಂಗಮರಿಗೆ ನೀಡಿದ ಸುಂಕದಾನ.
೧೮೬೩	–	ಹಳೆಯ ಹುಬ್ಬಳ್ಳಿಯ ಅನಂತನಾಥ ಬಸದಿಯ ೧೧೦೦ ವರ್ಷಗಳ ಹಿಂದಿನ ಜಾಗಟೆಯನ್ನು ಮುರಿದು ಹೊಸದಾಗಿ ಮಾಡಿದ ಉಲ್ಲೇಖ.
೯೨೪	–	ಮೋರಿಯರ ಕಲಿಬಿಟ್ಟಯ್ಯನಿಂದ ಕೆರೆಯ ನಿರ್ಮಾಣ ಹಾಗೂ ದಾನ.
–	–	ತ್ರುಟಿತ, ತುಣುಕು.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೯೯	ಹುಬ್ಬಳ್ಳಿ	–	–	ಪ್ರಿನ್ಸ ಆಫ್ ವೇಲ್ಸ್ ಮ್ಯೂಜಿಯಂ, ಮುಂಬೈ	ಕ.ಚಾ; ಸೋಮೇಶ್ವರ IV ಗೋ.ಕ; ಜಯಕೇಶಿ III
	೧೦೦	ಹುಬ್ಬಳ್ಳಿ	೧೯೨೫–೨೬	೪೨೭	ಜಂಬುಕೇಶ್ವರ ದೇವಾಲಯ ಮಧ್ಯ ಮಂಟಪದ ದ್ವಾರ–ಬಲಕಂಬ	ಯಾ; ಸಿಂಘಣ
	೧೦೧	ಹುಬ್ಬಳ್ಳಿ	೧೯೨೫–೨೬	೪೨೬	ಜಂಬುಕೇಶ್ವರ ದೇವಾಲಯ–ಎದುರು	ಯಾ; ಕನ್ನರದೇವ
	೧೦೨	ಹುಬ್ಬಳ್ಳಿ	೧೯೪೧–೪೨	೩೭	ಕಚೇರಿ–ಆವರಣ	–
	೧೦೩	ಹುಬ್ಬಳ್ಳಿ	೧೯೪೧–೪೨	೩೮	ಕಚೇರಿ–ಆವರಣ	–
	೧೦೪	ಹುಬ್ಬಳ್ಳಿ	೧೯೪೧–೪೨	೪೦	ಕಚೇರಿ–ಆವರಣ –ವೀರಗಲ್ಲು	–

ಮಿತಿ	ಪ್ರಕಟನೆ	ವಿಷಯ
೧೧೯೮	KK p 467-74	ಚೌಗಾವೆ, ನವಿಲೂರ ಕುರಿಬಸೇಣಿಗರ ಅನುಮತಿಯ ಮೇರೆಗೆ ಎಲೆಯ ಪೂರ್ವಳ್ಳಿಯ ಇನ್ನೂರು ಮಹಾಜನರು ಸೇಣಿಗೇಶ್ವರ ದೇವರಿಗೆ ನೀಡಿದ ಭೂದಾನ.
೧೨೪೪	SII XV 179	ತ್ರುಟಿತ, ದೇವರಿಗೆ ಎತ್ತುಗಳನ್ನು ದಾನ ಮಾಡಿದ ಉಲ್ಲೇಖ.
೧೨೪೮	SI I XV 187	ಬೀಚಿಸೆಟ್ಟಿಯ ಅಳಿಯ ಮಲ್ಲಿಸೆಟ್ಟಿಯಿಂದ ಬ್ರಾಹ್ಮಣರಿಗೆ ಭೂದಾನ.
೧೬೪೪	–	ತ್ರುಟಿತ, ಅಸ್ಪಷ್ಟ.
ಸುಶ;೧೮	–	ಶಿಷ್ಯ ರಂಗುಭಟ್ಟನ ಸರ್ವಮಾನ್ಯ ಹೊಲ ಎಂಬ ಉಲ್ಲೇಖ.
–	–	ತ್ರುಟಿತ, ತುಣುಕು.

❖❖

ಗದಗ ತಾಲೂಕ

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
೧	೧	ಅಸುಂಡಿ	೧೯೨೬-೨೭	೧೬೨	ಉಡಚವ್ವನ ಗುಡಿ-ಹಿಂದೆ	ರಾ; ನಿತ್ಯವರ್ಷ
	೨	ಅಸುಂಡಿ	೧೯೨೬-೨೭	೧೬೦	ಈಶ್ವರಗುಡಿ-ಎದುರು	ಕ.ಚಾ ಜಯಸಿಂಹ II
	೩	ಅಸುಂಡಿ	೧೯೨೬-೨೭	೧೬೧	ಹನುಮಂತ ದೇವರ ಗುಡಿ-ಎದುರು	ಕ.ಚಾ. ಸೋಮೇಶ್ವರ I
	೪	ಅಸುಂಡಿ	೧೯೨೬-೨೭	೧೬೩	ಮಲ್ಲಿದೇವಿ ಕಟ್ಟೆ	ಕ.ಚಾ. ಸೋಮೇಶ್ವರ I
	೫	ಅಸುಂಡಿ	೧೯೨೬-೨೭	೧೫೯	ಈಶ್ವರ ಗುಡಿ-ಗೋಡೆ	ಯಾ; ರಾಮಚಂದ್ರ
	೬	ಎಲಿಶಿರೂರ	೧೯೨೬-೨೭	೬೦	ಚಾವಡಿ ಹತ್ತಿರ-ವೀರಗಲ್ಲು	ರಾ; ಕೃಷ್ಣ II
	೭	ಎಲಿಶಿರೂರ	೧೯೨೬-೨೭	೬೨	ಚಾವಡಿ ಹತ್ತಿರ-ವೀರಗಲ್ಲು	ಕ.ಚಾ; ಇರಿವಬೆಡಂಗ ಕ.ಚಾ ಸೋಮೇಶ್ವರ II
	೮	ಎಲಿಶಿರೂರ	೧೯೨೬-೨೭	೬೩	ಚಾವಡಿ ಹತ್ತಿರ -ವೀರಗಲ್ಲು	ಕ.ಚಾ;ಸತ್ತಿಗ (ಇರಿವಬೆಡಂಗ)
	೯	ಎಲಿಶಿರೂರ	೧೯೩೪-೩೫	೭೮	ಚಾವಡಿ ಹತ್ತಿರ -ವೀರಗಲ್ಲು	-
	೧೦	ಎಲಿಶಿರೂರ	೧೯೨೬-೨೭	೬೬	ಭೋಗೇಶ್ವರ ಗುಡಿ	ಕ.ಚಾ; ವಿಕ್ರಮಾದಿತ್ಯ VI

ಮಿತಿ	ಪ್ರಕಟನೆ	ವಿಷಯ
೯೨೫	SII XI- i 34	ಬಂಕಾಪುರದ ಧೋರಜಿನಾಲಯದ ಚಂದ್ರಪ್ರಭಭಟ್ಟನು ಸುವಂಡಿಯನ್ನಾಳುವಾಗ ನಾಗಯ್ಯನಿಂದ ಭೂದಾನ.
೧೦೨೬	SII XI- i 63	ಅಸ್ಪಷ್ಟ, ಬಾಚಯ್ಯ ನಾಯಕನಿಂದ ಭೋಗೇಶ್ವರದೇವರಿಗೆ ಭೂದಾನ.
೧೦೫೩	SII XI- i 89	ಶೌಚಯನಾಯಕನಿಂದ ಸೋಮೇಶ್ವರ ದೇವರಿಗೆ ಭೂದಾನ.
೧೦೬೪	SII XI - i 100	ತ್ರುಟಿತ,, ಶಾಂತರಾಶಿಪಂಡಿತರ ಕಾಲತೊಳೆದು ಬಿಟ್ಟ ಭೂದಾನ.
೧೨೮೯	SII XV 201	ಊರದೇವತೆಗೆ ನೀಡಿದ ಭೂದಾನ.
೯೦೧	SII XI- i 25	ತ್ರುಟಿತ, ಮಹಾಶ್ರೀಮಂತ ಬೆಳುವಲ-೩೦೦ ಆಳುತ್ತಿದ್ದ ಉಲ್ಲೇಖ.
೧೦೦೫ ೧೧೩೮	SII XI- i 50	ತ್ರುಟಿತ, ಮಹಾಮಂಡಲೇಶ್ವರ ಶೋಭನರಸ ಮತ್ತು ಮಹಾಪ್ರಧಾನ ಮಹಾದೇವಯ್ಯರ ಬೇರೆ ಬೇರೆ ಕಾಲದಲ್ಲಿ ನೀಡಿದ ಎರಡು ದಾನಗಳು.
೧೦೦೬	SII XI- i 51	ಉಣಕಲ್ಲ ಕೋಟೆಕಾಳಗದಲ್ಲಿ ಕೇತನ ವೀರಮರಣ.
ಸು.ಶ;೧೧	SII XVIII- 343	ವೀರನೊಬ್ಬನ ಮರಣ.
೧೧೧೯	SII XI- ii 158	ಎಲೆಯ ಸಿರೂರಿನ ಪ್ರತಿಷ್ಠಿತರಿಂದ ಭೋಗೇಶ್ವರ ದೇವಾಲಯಕ್ಕೆ ದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೧೧	ಎಲಿಶಿರೂರ	೧೯೨೬–೨೭	೬೧	ಚಾವಡಿಯ ಹತ್ತಿರ –ವೀರಗಲ್ಲು	ಕ.ಚಾ; ವಿಕ್ರಮಾದಿತ್ಯ VI
	೧೨	ಎಲಿಶಿರೂರ	೧೯೨೬–೨೭	೬೪	ಭೋಗೇಶ್ವರ ಗುಡಿ–ಗೋಡೆ	ಕ.ಚಾ ಜಗದೇಕಮಲ್ಲ II
	೧೩	ಎಲಿಶಿರೂರ	೧೯೨೬–೨೭	೬೫	ಅದೇಕಲ್ಲು	ಕಲ; ಬಿಜ್ಜಳ
	೧೪	ಎಲಿಶಿರೂರ	೧೯೨೬–೨೭	೬೭	ಭೋಗೇಶ್ವರ ಗುಡಿ ಹತ್ತಿರ–ಕಂಬ	ಕ.ಚಾ ಸೋಮೇಶ್ವರ I
೩	೧೫	ಕಣಗಿನಹಾಳ	೧೯೨೬–೨೭	೧೬೪	ನಾರಾಯಣ ದೇವರ ಗುಡಿ	ಸಿಂಧ; ಪೆರ್ಮಾಡಿ
೪	೧೬	ಕಣವಿ	೧೯೨೬–೨೭	೧೧೮	ಈಶ್ವರ ಗುಡಿ –ಗೋಡೆ	ಕ.ಚಾ; ವಿಕ್ರಮಾದಿತ್ಯ VI
	೧೭	ಕಣವಿ	೧೯೩೪–೩೫	೭೨	ಮೈಲಾರಲಿಂಗನ ಗುಡಿ	ಕ.ಚಾ; ಜಗದೇಕಮಲ್ಲ II
	೧೮	ಕಣವಿ	೧೯೩೪–೩೫	೭೩	ಅದೇಕಲ್ಲು	ಸಿಂಧ; ಬಿಜ್ಜಳ
	೧೯	ಕಣವಿ	೧೯೨೬–೨೭	೧೧೯	ಈಶ್ವರ ಗುಡಿ– ಗೋಡೆ	ಕಲ; ಸೋವಿದೇವ
	೨೦	ಕಣವಿ	೧೯೨೬–೨೭	೧೧೯	ಈಶ್ವರ ಗುಡಿ– ಗೋಡೆ	ಸಿಂಧ ಬಿಜ್ಜಳ
	೨೧	ಕಣವಿ	೧೯೩೪–೩೫	೭೪	ಚಾವಡಿಯ ಹತ್ತಿರ ವೀರಗಲ್ಲು	–

ಮಿತಿ	ಪ್ರಕಟನೆ	ವಿಷಯ
೧೧೧೮	SII XI- ii 167	ಎಲೆಯ ಸಿರಿವೂರ ಗಾವುಂಡರಿಂದ ಬೆಳ್ವೇಶ್ವರ ದೇವಾಲಯಕ್ಕೆ ಭೂದಾನ.
೧೧೪೪	SII XV 25	ನಾಮಿಯಣ್ಣನಿಂದ ಭೋಗೇಶ್ವರ ದೇವಾಲಯಕ್ಕೆ ದಾನ.
೧೧೬೭	SII XV 107	ಸೊರಟೂರ ಮಹಾಪ್ರಭು ದಾಸಿರಾಜಯ್ಯನಿಂದ ಭೋಗೇಶ್ವರದೇವರಿಗೆ ದಾನ.
-	SII XI- i 102	ಅಪೂರ್ಣ, ಕುಮಾರ ಭುವನೈಕಮಲ್ಲನ ಪ್ರಶಸ್ತಿ.
ಸು.ಶ.; ೧೨	SII XV 235	ತುಣುಕು, ಸಿಂಧ ಮಹಾಮಂಡಲೇಶ್ವರ ಆಚರಸ, ಅರಸಿ ಮಹಾದೇವಿ ಹಾಗೂ ಕುಮಾರ ಪೆರ್ಮಾಡಿ ಭೂಪರ ಉಲ್ಲೇಖ.
೧೧೦೫	SII XI- ii 156	ಕಣಿಯ ಅಜ್ಜಗಾವುಂಡನಿಂದ ಮೂಲಸ್ಥಾನ ದೇವರಿಗೆ ಭೂದಾನ.
೧೧೪೨	SII XVIII-145	ಮೂಲಸ್ಥಾನದೇವರ ತೋಟದ ಪೆರ್ಜುಂಕ ಮತ್ತು ವಡ್ಡರಾವುಳಗಳ
	ದಾನ.	
೧೧೪೩	SII XVIII- 146	ಕೇಣಿಕಾರ ಮಾರಮರಸಾದಿಗಳಿಂದ ಸುಂಕದಾನ.
೧೧೭೩	SII XV 121	ಚವುಂಡನಾಯಕನಿಂದ ಮೂಲಸ್ಥಾನದೇವರಿಗೆ ದಾನ.
೧೧೭೩	SII XV 121	·ಬಲದೇವನಾಯಕನಿಂದ ಮೂಲಸ್ಥಾನದೇವರಿಗೆ ದಾನ.
ಸು.ಶ;೧೩	SII XVIII - 400	ಚೌಡೇನಾಯಕನ ಮಗ ದೇವೇನಾಯಕನ ಉಲ್ಲೇಖ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೨೨	ಕಣವಿ	೧೯೩೪–೩೫	೭೧	ಮೈಲಾರಲಿಂಗನ ಗುಡಿ–ವೀರಗಲ್ಲು	ವಿ; ಹರಿಹರ
೫	೨೩	ಕಲ್ಲೂರ	೧೯೨೬–೨೭	೧೦೬	ಕಲ್ಲಪ್ಪದೇವರ ಗುಡಿ–ಎದುರು	–
೬	೨೪	ಕಳಸಾಪೂರ	೧೯೨೬–೨೭	೨೭	ವೀರಭದ್ರದೇವರ ಗುಡಿ	–
೭	೨೫	ಕುರ್ತಕೋಟಿ	೧೯೨೬–೨೭	೧೨೭	ಕಲ್ಮೇಶ್ವರ ಗುಡಿ–ಹಿಂದೆ	ಬಾ.ಚಾ; ವಿಜಯಾದಿತ್ಯ
	೨೬	ಕುರ್ತಕೋಟಿ	೧೯೨೬–೨೭	೧೨೬	ವೀರಭದ್ರದೇವರ ಗುಡಿ	ರಾ;ಕೃಷ್ಣ III
	೨೭	ಕುರ್ತಕೋಟಿ	೧೯೨೬–೨೭	೧೨೮	ಸವುಳು ನೀರಿನ ಭಾವಿ ಹತ್ತಿರ	ಕ.ಚಾ; ವಿಕ್ರಮಾದಿತ್ಯ VI
	೨೮	ಕುರ್ತಕೋಟಿ	೧೯೨೬–೨೭	೧೨೨	ವಿರೂಪಾಕ್ಷದೇವರ ಗುಡಿ–ಗೋಡೆ	ಕ.ಚಾ; ವಿಕ್ರಮಾದಿತ್ಯ VI
	೨೯	ಕುರ್ತಕೋಟಿ	೧೯೨೬–೨೭	೧೨೪	ಕೆರೆಯ ಏರಿ	ಕ.ಚಾ; ವಿಕ್ರಮಾದಿತ್ಯ VI
೭	೩೦	ಕುರ್ತಕೋಟಿ	೧೯೨೬–೨೭	೧೨೩	ವಿರೂಪಾಕ್ಷದೇವರ ಗುಡಿ–ಕಂಬ	ಕ.ಚಾ; ವಿಕ್ರಮಾದಿತ್ಯ VI
	೩೧	ಕುರ್ತಕೋಟಿ	೧೯೨೬–೨೭	೧೨೫	ನರಸಿಂಹದೇವರ ಗುಡಿ–ಎದುರು	ಕ.ಚಾ;ಸೋಮೇಶ್ವರIII
೮	೩೨	ಕೋಟವುಮಚಗಿ	೧೯೨೬–೨೭	೧೨೯	ಕಲ್ಮೇಶ್ವರ ಗುಡಿ –ಎದರು	ಕ.ಚಾ; ವಿಕ್ರಮಾದಿತ್ಯ V
	೩೩	ಕೋಟವುಮಚಗಿ	೧೯೨೬–೨೭	೧೩೨	ಸೋಮೇಶ್ವರ ದೇವಾಲಯ	ಕ.ಚಾ; ವಿಕ್ರಮಾದಿತ್ಯ VI

ಮಿತಿ	ಪ್ರಕಟನೆ	ವಿಷಯ
೧೪೦೮	SII XVIII – 276	ದುವೆನಾಯಕ ಮತ್ತು ಆತನ ಹೆಂಡತಿ ನಾಗಾಯಿ ದೇಮಾಯಿಯರ ಮರಣ.
ಸು.ಶ; ೧೫	SII XV 672	ಮಲ್ಲಿಕಾರ್ಜುನದೇವರಿಗೆ ಮುಳಗುಂದ ವಳಿತದ ಕಲೂರ ಗ್ರಾಮದಾನ.
ಸು.ಶ; ೧೫	SII XV -670	ತ್ರುಟಿತ, ಸೋಮನಾಥ ದೇವಾಲಯಕ್ಕೆ ತೆಂಗಿನ ಸುಂಕದಾನ.
-	SII XI- i 2	ಲೋಕೆತಿನಿಮ್ಮಡಿ ಕುರುತ್ತ ಕುಂಟೆಯನ್ನಾಳುವಾಗ ಮುಪಣನು ಬಿಟ್ಟ ದಾನ.
೧೯೪೬	SII XI - i 37	ತ್ರುಟಿತ, ನಾಗಗಾವುಂಡನಿಂದ ಮೂಲಸ್ಥಾನದೇವರಿಗೆ ಭೂದಾನ.
೧೦೮೨	SII XI- ii 127	ದಂಡನಾಯಕ ವಾಮದೇವಯ್ಯನು ಕೆರೆಗೆ ನೀಡಿದ ಭೂದಾನ.
೧೦೮೭	SII XI- ii 133	ಜರಗರ ಡೋಣಿ ಸಾಸಿರ್ವರು ದಾಸೇಶ್ವರದೇವರಿಗೆ ನೀಡಿದ ದಾನ.
೧೦೮೭	SII XI- ii 134	ಬೆಲ್ಕೆಯರ ಎರೆಯಮಯ್ಯನು ಎರೆಯ ವಿಷ್ಣುಕೇಶವ ದೇವರಿಗೆ ಬಿಟ್ಟ ಭೂದಾನ.
೧೧೨೬	SII XI- ii 200	ಕೇಶಿರಾಜನು ದಾಸೇಶ್ವರ ದೇವಾಲಯಕ್ಕಾಗಿ ಡೋಣಿ ಸಾಸಿರ್ವರಿಗೆ ನೀಡಿದ ಸುಂಕದಾನ
೧೧೩೮	SII XV 17	ತ್ರುಟಿತ, ಬೊಪ್ಪಯ್ಯನಾಯಕನಿಂದ ನಂದಾದೀವಿಗೆಗಾಗಿ ದಾನ.
೧೦೧೨	SII XI- i 56	ದಂಡನಾಯಕ ಕೇಶವಯ್ಯನಿಂದ ಶ್ರೀಧರಭಟ್ಟನಿಗೆ ವುಮ್ಮಚಗಿ ಗ್ರಾಮದಾನ.
೧೦೯೯	EI XX p 64-70	ತ್ರುಟಿತ, ದಂಡನಾಯಕ ಅನಂತಪಾಲರಸನು ಬೆಳ್ವೊಲ–೩೦೦, ಪುರಿಗೆರೆ–೩೦೦ಆಳುವಾಗ ಬಿಟ್ಟ ದತ್ತಿ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೩೪	ಕೋಟವುಮಚಗಿ	೧೯೨೬-೨೭	೧೩೦	ಸೋಮೇಶ್ವರ ದೇವಾಲಯ	ಕ.ಚಾ; ವಿಕ್ರಮಾದಿತ್ಯ VI
	೩೫	ಕೋಟವುಮಚಗಿ	೧೯೩೨-೩೩	೧೯೨	ಸೋಮೇಶ್ವರ ದೇವಾಲಯದ ಎದುರುನಂದಿಕಂಬ	ಕ.ಚಾ; ಸೋಮೇಶ್ವರ III
	೩೬	ಕೋಟವುಮಚಗಿ	೧೯೨೬-೨೭	೧೩೧	ಸೋಮೇಶ್ವರ ದೇವಾಲಯ	ಕ.ಚಾ; ಜಗದೇಕಮಲ್ಲ
	೩೭	ಕೋಟವುಮಚಗಿ	೧೯೨೬-೨೭	೧೩೩	ಜೈನ ಬಸದಿ	ಕ.ಚಾ; ಜಗದೇಕವಲ್ಲ
೯	೩೮	ಗದಗ	೧೯೩೨-೩೩	೧೮೪	ವೀರನಾರಾಯಣ ಗುಡಿ ಉತ್ತರದಿಕ್ಕಿನ ಪ್ರಾಕಾರ	ರಾ; ನಿರುಪಮ
	೩೯	ಗದಗ	೧೯೨೬-೨೭	೧೦	ತ್ರಿಕೂಟೇಶ್ವರ ದೇವಾಲಯ-ಪ್ರಾಕಾರ	ಕ.ಚಾ; ಇರಿವಬೆಡಂಗ
	೪೦	ಗದಗ	೧೯೩೨-೩೩	೧೭೯	ವೀರನಾರಾಯಣ ಗುಡಿ-ಗೋಪುರ ಮೇಲ್ಭಾವಣಿ	ಕ.ಚಾ; ಇರಿವಬೆಡಂಗ
	೪೧	ಗದಗ	೧೯೨೬-೨೭	೨	ತ್ರಿಕೂಟೇಶ್ವರ ದೇವಾಲಯ-ಪ್ರಾಕಾರ	ಕ.ಚಾ ವಿಕ್ರಮಾದಿತ್ಯ (IV)
	೪೨	ಗದಗ	೧೯೨೬-೨೭	೧೩	ವೀರನಾರಾಯಣ ಗುಡಿ-ಭಾವಿಯ ಹತ್ತಿರ	ಕ.ಚಾ; ಜಯಸಿಂಹ II

ಮಿತಿ	ಪ್ರಕಟನೆ	ವಿಷಯ
೧೧೧೨	SII XI- ii 161	ತ್ರುಟಿತ, ವಾಮಣಯ್ಯ ನಾಯಕನ ಸ್ತುತಿ.
–	SII XVIII – 143	ತುಣುಕು, ಉಮ್ಮಚಗಿ ಅಗ್ರಹಾರದ ಉಲ್ಲೇಖ.
೧೧೪೨	SII XV 23	ದಂಡನಾಯಕ ಕೇಶಿರಾಜಯ್ಯನಿಂದ ಸೋಮೇಶ್ವರದೇವರಿಗೆ ಸುಂಕದಾನ.
ಸು.ಶ; ೧೬	SII XV 696	ಉಮಚಗಿ ಗ್ರಾಮಕ್ಕೆ 'ಸದಾಶಿವರಾಯಸಮುದ್ರ' ಎಂಬ ನಾಮಕರಣವಿದ್ದ ಉಲ್ಲೇಖ.
೯೧೯	–	ಅತಿತ್ರುಟಿತ, ಬೆಳ್ವೊಲದ ಅಧಿಕಾರಿಯಾದ ಮಹಾಶ್ರೀಮಂತ ಹಾಗೂ ಮಹಾಜನರ ನಡುವೆ ಆದ ಭಟ್ಟಿ ಕೆರೆಯ ತೆರಿಗೆಯ ಒಪ್ಪಂದದ ಉಲ್ಲೇಖ.
೧೦೦೨	SII XI- i 48	ಶೋಭನರಸರಿಂದ ಕಾಳಜ್ಞಾನಿ ವಖ್ಖಾಣಿಜೀಯರಿಗೆ ದಾನ.
–	– ಅಗ್ರಹಾರದ ಮುತ್ತಿಗೆ	ತ್ರುಟಿತ, ದೇಸಿಂಗನಿಂದ ಕಳ್ದುಗು
-	SII XI- i 76	ತ್ರುಟಿತ, ಅಸ್ಪಷ್ಟ; ಮಾಧವರಾಜನ ಸ್ತುತಿ.
೧೦೩೭	SII XI- i 72 EI XIX p 217-22	ದಾಮೋದರ ಸೆಟ್ಟಿಯಿಂದ ತ್ರೈಪುರುಷ ದೇವರಿಗೆ ಭೂದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೪೩	ಗದಗ	೧೯೩೨–೩೩	೧೮೯	ವೀರನಾರಾಯಣ ಗುಡಿ ಹತ್ತಿರ ಬ್ರಾಹ್ಮಣರ ಮನೆ ಹಿಂಭಾಗ	ಕ.ಚಾ; ಸೋಮೇಶ್ವರ I
	೪೪	ಗದಗ	೧೯೩೨–೩೩	೧೭೭	ವೀರನಾರಾಯಣ ಗುಡಿ ರಂಗಮಂಟಪದ ಬದಿ	ಕ.ಚಾ ; ವಿಕ್ರಮಾದಿತ್ಯ VI
	೪೫	ಗದಗ	೧೯೬೧–೬೨	೪೬೪	ಉಮಾಮಹೇಶ್ವರ	ವಿಗ್ರಹದ ಹತ್ತಿರ
	೪೬	ಗದಗ	೧೯೩೨–೩೩	೧೮೮	ವೀರನಾರಾಯಣ ಗುಡಿ–ಪ್ರಾಕಾರ	ಕ.ಚಾ; ವಿಕ್ರಮಾದಿತ್ಯ VI
	೪೭	ಗದಗ	೧೯೨೬–೨೭	೫	ತ್ರಿಕೂಟೇಶ್ವರ ದೇವಾಲಯ ಪ್ರಾಕಾರ	ಕ.ಚಾ; ವಿಕ್ರಮಾದಿತ್ಯ VI
	೪೮	ಗದಗ	೧೯೨೬–೨೭	೪	ತ್ರಿಕೂಟೇಶ್ವರ ದೇವಾಲಯ ಪ್ರಾಕಾರ	ಕ.ಚಾ; ವಿಕ್ರಮಾದಿತ್ಯ VI

ಮಿತಿ	ಪ್ರಕಟನೆ	ವಿಷಯ
೧೦೬೫	–	ತ್ರುಟಿತ, ಈಚಿನ ಅಕ್ಷರ; ಮೂಲಶಾಸನದ ಪ್ರತಿ ಇರಬಹುದು. ಮಹಾಮಂಡಲೇಶ್ವರ ಜೊಳಗೊಂಡ ಮಾರರಸನಿಂದ ದೇವಾಲಯ ಮತ್ತು ಮಠಗಳಿಗಾಗಿ ತತ್ಪುರುಷಜೀಯನಿಗೆ ಭೂದಾನ.
೧೦೯೯	EI XV p 348	ದಂಡನಾಯಕ ಸೋಮೇಶ್ವರ ಭಟ್ಟೋಪಾಧ್ಯಾಯರಿಂದ ಲಕ್ಕುಂಡಿಯಲ್ಲಿ ಪ್ರಾಭಾಕರ ವ್ಯಾಖ್ಯಾನ ಶಾಲೆಯ ನಿರ್ಮಾಣ ಹಾಗೂ ದಾನ. ಮತ್ತು ವಿಕ್ರಮಾದಿತ್ಯನಿಂದ ವಿಕ್ರಮವರ್ಷ ಪ್ರಾರಂಭವಾದ ಉಲ್ಲೇಖ.
ಸು.ಶ; ೧೧	–	ವಾವನರಸನ ಪತ್ನಿ ರೇವಕಬ್ಬರಸಿ ಉಮಾಮಹೇಶ್ವರ ಶಿಲ್ಪ ಮಾಡಿಸಿದ ಉಲ್ಲೇಖ.
೧೧೦೧	–	ಅತಿತ್ರುಟಿತ, ಮದ್ದಿಮಯ್ಯನಾಯಕನು ಶಂಕರನಾರಾಯಣ ದೇವಾಲಯ,ಕೆರೆ ಹಾಗೂ ಸತ್ರ ನಿರ್ಮಿಸಿ ಭೂಮಿ ಮತ್ತು ಹಣ ದಾನ ಮಾಡಿದ ಉಲ್ಲೇಖ.
೧೧೦೨	SII XI- ii 150	ದಂಡನಾಯಕ ಮಾಧವನಿಂದ ತ್ರಿಕೂಟೇಶ್ವರ ಮತ್ತು ಕೇಶವದೇವರಿಗೆ ದಾನ.
–	SII XI- ii 201	ಮಹಾಮಂಡಲೇಶ್ವರ ಇಂದ್ರಕೇಶಿಯಿಂದ ತ್ರಿಕೂಟೇಶ್ವರನಿಗೆ ದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೪೯	ಗದಗ	೧೯೩೨–೩೩	೧೮೫	ವೀರನಾರಾಯಣ ಗುಡಿ–ಹೊರಗೆ	ಕ.ಚಾ; ವಿಕ್ರಮಾದಿತ್ಯ VI
	೫೦	ಗದಗ	೧೯೩೨–೩೩	೧೮೭	ವೀರನಾರಾಯಣ ಗುಡಿ–ಹೊರಗೆ –ಪ್ರಾಕಾರ	ಕ.ಚಾ; ಸೋಮೇಶ್ವರ III
	೫೧	ಗದಗ	೧೯೨೬–೨೭	೧೫	ವೀರನಾರಾಯಣ ಗುಡಿ–ಹೊರಗೆ –ಪ್ರಾಕಾರ	ಕಲ; ಬಿಜ್ಜಳ
	೫೨	ಗದಗ	೧೯೨೬–೨೭	೧೧	ತ್ರಿಕೂಟೇಶ್ವರ ದೇವಾಲಯ–ಪ್ರಾಕಾರ	ಕಲ; ಸಂಕಮ
	೫೩	ಗದಗ	೧೯೨೬–೨೭	೩	ತ್ರಿಕೂಟೇಶ್ವರ ದೇವಾಲಯ–ಪ್ರಾಕಾರ	ಕಲ; ಸಂಕಮ
					ಕ.ಚಾ; –	
	೫೪	ಗದಗ	೧೯೨೬–೨೭	೧೬	ವೀರನಾರಾಯಣ ಗುಡಿ–ಪ್ರಾಕಾರ	ಕ.ಚಾ; ಸೋಮೇಶ್ವರ IV
	೫೫	ಗದಗ	೧೯೩೨–೩೩	೧೮೨	ವೀರನಾರಾಯಣ ಗುಡಿ–ಪ್ರಾಕಾರ –ಉತ್ತರ ದಿಕ್ಕಿನ ಪ್ರಾಕಾರ	ಕ.ಚಾ; ಸೋಮೇಶ್ವರ IV
	೫೬	ಗದಗ	೧೯೨೬–೨೭	೧೨	ತ್ರಿಕೂಟೇಶ್ವರ ದೇವಾಲಯ–ಪ್ರಾಕಾರ	ಯಾ;ಭಿಲ್ಲಮ

ಮಿತಿ	ಪ್ರಕಟನೆ	ವಿಷಯ
೧೧೧೭	–	ಮಣಿಯರ ಮಹಾದೇವಯ್ಯನಾಯಕನಿಂದ ಸತ್ರ ಹಾಗೂ ಮಲ್ಲಿಕಾರ್ಜುನ ದೇವಾಲಯಗಳಿಗೆ ಭೂದಾನ.
೧೧೩೭	–	ಅಸ್ಪಷ್ಟ ಚೌಡೆಯದೇವನಿಂದ ಕಾಳಿಮಯ್ಯಗೇರಿಯ ಹೃಷಿಕೇಶದೇವರಿಗೆ ಭೂದಾನ.
೧೧೬೨	SII XV 103	ಭೋಗೇಶ್ವರದೇವರಿಗೆ ನೀಡಿದ ದಾನ.
೧೧೮೪	SII XV 140	ಯೋಗಿ ಸಹಜಾನಂದದೇವನಿಂದ ನೀಡಿದ ದಾನ.
೧೧೮೪–೮೫	SII XV 547	ತ್ರುಟಿತ, ತ್ರಿಕೂಟೇಶ್ವರದೇವರಿಗೆ ನೀಡಿದ ದಾನ.
೧೧೮೫	SII XV 66	ವಿಷ್ಣುವರ್ಧನ ಬೀಚಿಸೆಟ್ಟಿಯಿಂದ ದೇವರಿಗಾಗಿ ದಾನ.
	–	ವಿಷ್ಣುವರ್ಧನ ಬೀಚಿಸೆಟ್ಟಿಯಿಂದ ಯಮೇಶ್ವರದೇವರಿಗೆ ಹಣದಾನ.
೧೧೮೬	SII XV 150 SII III p 217	ಹೇರೂರಿನಲ್ಲಿ ಬೀಡುಬಿಟ್ಟಾಗ ಅರಸನಿಂದ ತ್ರಿಕೂಟೇಶ್ವರದೇವರಿಗೆ ಬೆಳ್ವೊಲ–೩೦೦ ರಲ್ಲಿಯ ಹಿರಿಯ ಹಂದಿಗೊಳ ಗ್ರಾಮದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
೯	೫೭	ಗದಗ	೧೯೨೬–೨೭	೮	ತ್ರಿಕೂಟೇಶ್ವರ ದೇವಾಲಯ– ಪ್ರಾಕಾರ	ಹೊ; ಬಲ್ಲಾಳ II
	೫೮	ಗದಗ	೧೯೨೬–೨೭	೬	ತ್ರಿಕೂಟೇಶ್ವರ ದೇವಾಲಯ– ಪ್ರಾಕಾರ	ಹೊ; ಬಲ್ಲಾಳ II
	೫೯	ಗದಗ	೧೯೩೨–೩೩	೧೯೧	ತ್ರಿಕೂಟೇಶ್ವರ ದೇವಾಲಯ– ಪ್ರಾಕಾರ –ಮುಂಭಾಗ	–
	೬೦	ಗದಗ	೧೯೨೬–೨೭	೯	ತ್ರಿಕೂಟೇಶ್ವರ ದೇವಾಲಯ– –ಪ್ರಾಕಾರ	ಯಾ; ಸಿಂಘಣ
	೬೧	ಗದಗ	೧೯೨೬–೨೭	೧	ತ್ರಿಕೂಟೇಶ್ವರ ದೇವಾಲಯ– –ಪ್ರಾಕಾರ	
	೬೨	ಗದಗ	೧೯೨೬–೨೭	೧೭	ವೀರನಾರಾಯಣ ಗುಡಿ ಮಂಟಪ ಕಂಬ	–
	೬೩	ಗದಗ	೧೯೨೬–೨೭	೧೮	ವೀರನಾರಾಯಣ ಗುಡಿ ಮಂಟಪ ಕಂಬ	–

ಮಿತಿ	ಪ್ರಕಟನೆ	ವಿಷಯ
೧೧೯೧	SII XV 208 (Noticed) EI VI p89-97	ವೀರಬಲ್ಲಾಳ ದೇವನಿಂದ ಸ್ವಯಂಭೂತ್ರಿಕೂಟೇಶ್ವರ ದೇವಾಲಯಕ್ಕೆ
೧೧೯೨	IA II p 299-301	ಹೊಂಬಾಳಲು ಗ್ರಾಮ ದಾನ.
೧೧೯೯	SII XV 214	ತ್ರುಟಿತ, ಮಹಾಮಂಡಲೇಶ್ವರ ರಾಯಸರಿಂದ ತ್ರಿಕೂಟೇಶ್ವರದೇವರಿಗೆ ನೀಡಿದ ದಾನ.
ಸು.ಶ; ೧೨	–	ತ್ರುಟಿತ, ಚಂದ್ರಭೂಷಣಮುನಿಯ ಸ್ತುತಿ.
೧೨೧೩	SII XV 159	ಗದಗಿನ ಎಪ್ಪತ್ತೆರಡು ಮಹಾಜನರು ತ್ರಿಕೂಟೇಶ್ವರ ದೇವರಿಗೆ ನೀಡಿದ ದಾನ.
೧೨೨೫	SII XV 609	ಚಂಡವೆಯಿಂದ ತ್ರಿಕೂಟೇಶ್ವರ ದೇವಾಲಯಲಕ್ಕೆ ಎರಡು ಸುವರ್ಣ ಧ್ವಜಗಳ ದಾನ.
ಸು. ಶ; ೧೩	SII XV620	ತ್ರುಟಿತ, ಸುವರ್ಣ ಮತ್ತು ಭೂಮಿ ದಾನಗಳ ಉಲ್ಲೇಖ.
ಸು.ಶ; ೧೩	SII XV 621	ತ್ರೈಪುರುಷದೇವರಿಗೆ ಬಿಟ್ಟ ಭೂಮಿ ಹಾಗೂ ಸುವರ್ಣ ದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ–ವರ್ಷ	ನಂ.	ದೊರೆತ ಸ್ಥಳ	ಅರಸ
	೬೪	ಗದಗ	೧೯೪೪–೪೫ (KRI)	೩೦	ವೀರನಾರಾಯಣ ಗುಡಿ–ಬಾವಿ	–
	೬೫	ಗದಗ	೧೯೪೪–೪೫ (KRI)	೩೧	ವೀರನಾರಾಯಣ ಗುಡಿ–ಬಾವಿ ಪ್ರಾಕಾರ ಹೊರಗೆ	–
	೬೬	ಗದಗ	೧೯೩೨–೩೩	೧೮೬	ವೀರನಾರಾಯಣ ಗುಡಿ–ಬಾವಿ ಪ್ರಾಕಾರ ಹೊರಗೆ	ವಿ; ಕೃಷ್ಣದೇವರಾಯ
	೬೭	ಗದಗ	೧೯೨೬–೨೭	೧೪	ವೀರನಾರಾಯಣ ಗುಡಿ ಬಾವಿಯ ಹತ್ತಿರ	ವಿ.ಅಚ್ಯುತರಾಯ
	೬೮	ಗದಗ	೧೯೨೬–೨೭	೭	ತ್ರಿಕೂಟೇಶ್ವರ ದೇವಾಲಯ– ಪ್ರಾಕಾರ	ವಿ.ಅಚ್ಯುತರಾಯ
	೬೯	ಗದಗ	೧೯೩೨–೩೩	೧೮೧	ವೀರನಾರಾಯಣ ಗುಡಿ–ಪೂರ್ವ ಪ್ರಾಕಾರ	ವಿ.ಅಚ್ಯುತರಾಯ
	೭೦	ಗದಗ	೧೯೨೬–೨೭	೧೯	ಉಡಚವ್ವನ ಗುಡಿ ಎದುರು	–
	೭೧	ಗದಗ	೧೯೩೨–೩೩	೧೮೩	ವೀರನಾರಾಯಣ ಗುಡಿ–ಉತ್ತರ ದಿಕ್ಕಿನ ಪ್ರಾಕಾರ	ಕ.ಚಾ; ಸೋಮೇಶ್ವರ IV
	೭೨	ಗದಗ	೧೯೩೨–೩೩	೧೮೦	ವೀರನಾರಾಯಣ ಗುಡಿಯ ಪೂರ್ವ ದಿಕ್ಕಿನ–ಗೋಪುರ ಮೇಲ್ಭಾವಣಿ	–

ಮಿತಿ	ಪ್ರಕಟನೆ	ವಿಷಯ
ಸು.ಶ; ೧೩	KI V 109	ಅತಿತ್ರುಟಿತ, ಅಸ್ಪಷ್ಟ; ಮಂಗಲಪದ್ಯ ಮಾತ್ರ ಉಳಿದಿದೆ.
ಸು.ಶ; ೧೩	KIV 110	ಅತಿತ್ರುಟಿತ, ಮಂಗಲಪದ್ಯ ಮಾತ್ರ ಉಳಿದಿದೆ.
೧೫೨೦	–	ತಿಮ್ಮಪ್ಪನಾಯಕ ಅಯ್ಯನವರಿಂದ ಅರವಟ್ಟಿಗೆಗಳಿಗಾಗಿ ನಾಯನಪ್ಪನಾಯಕನಿಗೆ ಭೂದಾನ.
೧೫೩೯	SII XV 253	ಅರಸನಿಂದ ಬ್ರಾಹ್ಮಣರಿಗೆ ಆನಂದನಿಧಿದಾನ ಹಾಗೂ ಕುಮಾರವ್ಯಾಸನ ಉಲ್ಲೇಖ.
೧೫೩೯	SII XV 252	ಅರಸನಿಂದ ಬ್ರಾಹ್ಮಣರಿಗೆ ಆನಂದನಿಧಿ ದಾನ.
೧೫೪೦	–	ಅರಸನಂದ ಬ್ರಾಹ್ಮಣರಿಗೆ ಆನಂದನಿಧಿ ದಾನ.
ಸು. ಶ; ೧೬	SII XV 694	ಉಡಿಚೆಯ ದೇವತೆಯ ಉಲ್ಲೇಖ.
–	–	ತ್ರುಟಿತ, ಸಂಕಿಮಯ್ಯನಾಯಕ ಮತ್ತು ಮಹಾದೇವಭಟ್ಟರಿಂದ ಹನ್ನೆರಡು ಜನರಿಗೆ ದಾನ.
–	–	ಅತಿತ್ರುಟಿತ, ಬಾಯಿಕಬ್ಬೆಯಿಂದ ಭಟ್ಟವೃತ್ತಿ ಮತ್ತು ಚಟ್ಟವೃತ್ತಿಗಳಿಗೆ ಭೂಮಿ ಹಾಗೂ ಹಣದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೭೩	ಗದಗ	೧೯೩೨-೩೩	೧೭೮	ವೀರನಾರಾಯಣ ಗುಡಿಯ ದಕ್ಷಿಣ ಗೋಪುರ ಕಂಬ	–
	೭೪	ಗದಗ	೧೯೩೨-೩೩	೧೯೦	ಕೊನೇರಿ ತೀರ್ಥದ ಹನುಮಂತದೇವರ ಗುಡಿ ಹಿಂದೆ	–
೧೦	೭೫	ಗಾವರವಾಡ	೧೯೨೬-೨೭	೧೪೦	ನಾರಾಯಣ ಗುಡಿ –ಎದುರು	ರಾ; ಅಮೋಘವರ್ಷ I
	೭೬	ಗಾವರವಾಡ	೧೯೨೬-೨೭	–	ನಾರಾಯಣ ಗುಡಿ –ಎದುರು	ಕ.ಚಾ; ಸೋಮೇಶ್ವರ II
೧೧	೭೭	ಚಿಕ್ಕಹಂದಿಗೋಳ	೧೯೨೬-೨೭	೧೫೧	ಹನುಮಂತದೇವರ ಗುಡಿ–ಗೋಡೆ	ಕ.ಚಾ; ವಿಕ್ರಮಾದಿತ್ಯ VI
	೭೮	ಚಿಕ್ಕಹಂದಿಗೋಳ	೧೯೨೬-೨೭	೧೫೦	ಅಂದಾನಗೌಡ ಪೋಲಿಸ ಅವರ ಮನೆ–ಹಿತ್ತಲ	ಕಲ; ಸೋವಿದೇವಿ
೧೨	೭೯	ಚಿಂಚಲಿ	೧೯೨೬-೨೭	೧೦೫	ಹಾಳು ಗುಡಿ-ಕಂಬ	ರಾ; ಅಮೋಘವರ್ಷ I
	೮೦	ಚಿಂಚಲಿ	೧೯೩೪-೩೫	೭೦	ಹೊಸಹಟ್ಟಿಯವರ ಮನೆ–ಹಿತ್ತಲು	ರಾ; ಅಮೋಘವರ್ಷ I
	೮೧	ಚಿಂಚಲಿ	೧೯೨೬-೨೭	೧೦೪	ಹಾಳುಗುಡಿಯ ಹತ್ತಿರ	ರಾ; ಕೃಷ್ಣ II

ಮಿತಿ	ಪ್ರಕಟನೆ	ವಿಷಯ
–	–	ಮಹಾದೇವ ಮಂತ್ರಿಯಿಂದ ಕಲಿದೇವಸ್ವಾಮಿದೇವಾಲಯವೆಂದು ಕರೆಯುವ ಜೈನ ಮಂದಿರದ ಮಹಾಮಂಟಪದ ಜೀರ್ಣೋದ್ಧಾರ.
–	–	ತ್ರುಟಿತ, ಲೊಕ್ಕಿಗೊಂಡಿಯ ಸಾವಿರ ಮಹಾಜನರ ಉಲ್ಲೇಖ.
೮೬೯	SII XI-i 13	ತ್ರುಟಿತ, ದೇವಣ್ಣಯ್ಯನು ಬೆಳ್ವೊಲ–೩೦೦, ಪುಲಿಗೆರೆ–೩೦೦ ಆಳುವಾಗ ಬಿಟ್ಟ ತುಪ್ಪದ ಸುಂಕದಾನ.
೧೦೭೧	EI XV p 337	ಮಹಾಮಂಡಲೇಶ್ವರ ಲಕ್ಷ್ಮರಸನಿಂದ ಅಣ್ಣಿಗೆರೆಯಲ್ಲಿಯ ಜಿನಾಲಯಕ್ಕೆ ಪೂರ್ವದತ್ತಿಯ ಪುನರ್ಭರಣ.
೧೦೯೯	SII XI – ii 147 KI V 14	ಪ್ರತಿಕಂಠಚಂದನಿಂದ ಮಾಧವೇಶ್ವರ ದೇವಾಲಯ ನಿರ್ಮಾಣ ಮತ್ತು ಭೂದಾನ.
೧೧೭೪	SII XV 128 KI V 38	ಅತಿತ್ರುಟಿತ, ಜಿನಾಲಯಕ್ಕೆ ನೀಡಿದ ಭೂದಾನ.
-	SII XI-i 15	ಚಿಂಚಲದ ಐವತ್ತಾರು ಮಹಾಜನರ ಪಾದಪ್ರಕ್ಷಾಲನಗೈಯ್ದು ಗೋಸಹಸ್ರದಾನ ಮಾಡಿದ ಉಲ್ಲೇಖ.
–	–	ತ್ರುಟಿತ, ದೇವಣ್ಣಯ್ಯ, ಚಿಂಚಲ ಹಾಗೂ ಕುಂದಯ್ಯ ಸೆಟ್ಟಿಯರ ಉಲ್ಲೇಖ.
೮೯೭	SII XI-i 24	ತ್ರುಟಿತ, ಚಿಂಚಲದ ಐವತ್ತಾರುಮಹಾಜನರ ಸಮ್ಮುಖದಲ್ಲಿ ವೀರಗಲ್ಲು ನಿಲ್ಲಿಸಿದ ಉಲ್ಲೇಖ

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೮೨	ಚಿಂಚಲಿ	೧೯೨೬-೨೭	೧೦೨	ಹೊಸಹಟ್ಟಿಯವರ ಮನೆ-ಹಿತ್ತಲ	ರಾ; ಕೃಷ್ಣ II
೧೨	೮೩	ಚಿಂಚಲಿ	೧೯೨೬-೨೭	೧೦೩	ಕರಿದೇವರ ಗುಡಿ	ಕ.ಚಾ; ಸೋಮೇಶ್ವರ II
	೮೪	ಚಿಂಚಲಿ	೧೯೨೬-೨೭	೧೦೧	ಮಲ್ಲಿಕಾರ್ಜುನ ದೇವಾಲಯ -ಗೋಡೆ	ಕ.ಚಾ; ಸೋಮೇಶ್ವರ IV
೧೩	೮೫	ನಾಗಾವಿ	೧೯೨೬-೨೭	೨೧	ನಾಗಾರ್ಜುನ ಗುಡಿ-ಎದರು	ರಾ;ಖೊಟ್ಟಿಗ
	೮೬	ನಾಗಾವಿ	೧೯೨೬-೨೭	೨೨	ಕೋಡಿಬಸವಣ್ಣನ ಗುಡಿ-ಕಂಬ	ಹೊ; ಬಲ್ಲಾಳ II
	೮೭	ನಾಗಾವಿ	೧೯೨೬-೨೭	೨೩	ಕೋಡಿಬಸವಣ್ಣನ ಗುಡಿ-ಕಂಬ	ಯಾ; ಸಿಂಘಣ
	೮೮	ನಾಗಾವಿ	೧೯೨೬-೨೭	೨೪	ಕೋಡಿಬಸವಣ್ಣನ ಗುಡಿ-ಕಂಬ	ಯಾ; ಸಿಂಘಣ
	೮೯	ನಾಗಾವಿ	೧೯೨೬-೨೭	೨೬	ಕೋಡಿಬಸವಣ್ಣನ ಗುಡಿ ಮತ್ತೊಂದು ಕಂಬ	ಯಾ; ಸಿಂಘಣ
	೯೦	ನಾಗಾವಿ	೧೯೨೬-೨೭	೨೫	ಕೋಡಿಬಸವಣ್ಣನ ಗುಡಿ ಮತ್ತೊಂದು ಕಂಬ	ಯಾ; ಕನ್ನರ
೧೪	೯೧	ನೀಲಗುಂದ	–	–	ಅಂಗಡಿ ರಾಚಪ್ಪನವರ ಮನೆಯ ಹತ್ತಿರ	ರಾ; ಅಮೋಘವರ್ಷ I

ಮಿತಿ	ಪ್ರಕಟನೆ	ವಿಷಯ
೯೦೪	SII XI-i 27	ತ್ರುಟಿತ, ವತ್ಸಯ್ಯ ಬೆಳ್ವೊಲಮುನ್ನೂರರ ಸುಂಕವಾಳುತ್ತಿರುವಾಗ ನೀಡಿದ ದಾನ.
೧೦೬೯	SII XI – 108	ನಾಗೇಶ್ವರ ದೇವರಿಗೆ ಹೂದೋಟ ದಾನ.
೧೦೮೩	SII XV 64	ಜಕ್ಕಿಯಕ್ಕನಿಂದ ಮಲ್ಲಿಕಾರ್ಜುನ ದೇವರಿಗೆ ಭೂದಾನ.
೯೬೯	SII X-i 41	ತ್ರುಟಿತ,ರಾಮೇಶ್ವರ ದೇವಾಲಯಕ್ಕೆ ಶಿಕ್ಷಣಕ್ಕಾಗಿ ನೀಡಿದ ದಾನ.
೧೨೧೧	SII XV 221	ಧರ್ಮರಾಶಿ ಪಂಡಿತರಿಂದ ನಾಗಾಯಿಯ ಮಹಾಬಳೇಶ್ವರ ದೇವರಿಗೆ ದಾನ.
೧೨೧೩	SII XV 162	ಬೊಮ್ಮೋಜನಿಂದ ಮಹಾಬಳೇಶ್ವರ ದೇವರಿಗೆ ದಾನ.
೧೨೪೪	SII XV 178	ಮಹಾಬಳೇಶ್ವರದೇವರಿಗೆ ಪ್ರತಿಷ್ಠಿತ ಗ್ರಾಮಸ್ಥರುಬಿಟ್ಟ ದಾನ.
೧೨೪೬–೪೭	SII XV 181	ತ್ರುಟಿತ, ಮಹಾಬಲದೇವರಿಗೆ ಬಿಟ್ಟ ಸುಂಕದಾನ.
೧೨೩೩	SII XV 189	ಕೆಲವು ನಾಯಕರಿಂದ ಮಹಾಬಲೇಶ್ವರ ದೇವರಿಗೆ ದಾನ.
೮೬೬	EI VI p 98-108	ದೇವಣ್ಣಯ್ಯ ಬೆಳ್ವೊಲ ೩೦೦ ಆಳುವಾಗ ನೀರ್ಗುಂದ ಮಹಾಜನರಿಗೆ ಬಿಟ್ಟ ತುಪ್ಪದ ಸುಂಕ ದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೯೨	ನೀಲಗುಂದ	–	–	ಅಗಸಿಯ ಹತ್ತಿರ	ಕ.ಚಾ; ತೈಲ II
	೯೩	ನೀಲಗುಂದ	೧೯೨೬-೨೭	೧೨೧	ಕಲ್ಮೇಶ್ವರ ದೇವಾಲಯ	ಕ.ಚಾ;ವಿಕ್ರಮಾದಿತ್ಯ VI
	೯೪	ನೀಲಗುಂದ	೧೯೨೬-೨೭	೧೨೦	ಹಳ್ಳಿಯ ಪಶ್ಚಿಮಕ್ಕೆ -ಹೊಲ	–
೧೫	೯೫	ಬಳಗಾನೂರ	೧೯೨೬-೨೭	೧೪೧	ವೀರಭದ್ರದೇವರ ಗುಡಿ-ಎದುರು	ಕ.ಚಾ; ಸೋಮೇಶ್ವರ I
	೯೬	ಬಳಗಾನೂರ	೧೯೨೬-೨೭	೧೪೨	ಚಾವಡಿ-ಎದುರು	ಹೊ; ಬಲ್ಲಾಳ II
	೯೭	ಬಳಗಾನೂರ	೧೯೨೬-೨೭	೧೪೩	ವಿರಕ್ತಮಠದ ಹತ್ತಿರ-	
೧೬	೯೮	ಬೆಟಗೇರಿ	೧೯೨೬-೨೭	೨೦	ಮಲ್ಲಯ್ಯನ ಕಟ್ಟೆ-ವೀರಗಲ್ಲು	ರಾ; ಕೃಷ್ಣ II
೧೭	೯೯	ಬೆಂತೂರ	೧೯೨೬-೨೭	೧೫೨	ಅನ್ನದಾನಪ್ಪ ತುಪ್ಪರಿಯವರ ಮನೆಯಗೋಡೆ -ವೀರಗಲ್ಲು	ರಾ; ಅಮೋಘವರ್ಷ I
	೧೦೦	ಬೆಂತೂರ	೧೯೩೪-೩೫	೬೯	ಊರ ಕೆರೆ	ಕ.ಚಾ; ಸೋಮೇಶ್ವರ I
	೧೦೧	ಬೆಂತೂರ	೧೯೨೬-೨೭	೧೫೭	ಹನುಮಂತದೇವರ ಗುಡಿ-ಎದುರು	ಕ.ಚಾ; ಸೋಮೇಶ್ವರ I
	೧೦೨	ಬೆಂತೂರ	೧೯೨೬-೨೭	೧೩೫	ಶಂಭುಲಿಂಗ ದೇವಾಲಯ-ಕಂಬ	ಹೊ; ಬಲ್ಲಾಳ II

ಮಿತಿ	ಪ್ರಕಟನೆ	ವಿಷಯ
೯೮೨	EI IV p 204-8	ಶೋಭನರಸನು ವಿಷ್ಣುಭಟ್ಟನಿಗೆ ಸತ್ರಕ್ಕಾಗಿ ನೀರ್ಗುಂದ ಗ್ರಾಮದಲ್ಲಿ ನೀಡಿದ ಭೂದಾನ.
–	SII XI-ii 204	ತ್ರುಟಿತ, ಬಲವರ್ಮಯ್ಯ ಮತ್ತು ಭೋಗಾದಿತ್ಯದೇವರ ಪ್ರಶಸ್ತಿ.
೧೫೨೪	SII XV 685	ಮುಳಗುಂದ ಸಿದ್ಧೇಶ್ವರ ದೇವರಿಗೆ ವೆಂಗಲಪನಾಯಕ ನೀಡಿದ ಭೂದಾನ.
೧೦೫೪	SII XI-i90	ತ್ರುಟಿತ, ಭೂದಾನ ಮಾಡಿದ ಉಲ್ಲೇಖ.
-	SII XV 223	ಅತಿತ್ರುಟಿತ, ಭೂದಾನ ಹಾಗೂ ಚಂದ್ರಭೂಷಣ ಬೃತಿಯ ಉಲ್ಲೇಖ.
ಸು. ಶ; ೧೩	SII XV 624	ದೇಪರಸನಿಂದ ಭೂದಾನ.
೧೮೮	SII XI -i 21	ಕಲಿಗಳ್ಳ ಎಂಬವನ ವೀರಮರಣ.
೮೬೪	SII XI-i10	ಅತಿತ್ರುಟಿತ.
೧೦೪೩	–	ಅತಿತ್ರುಟಿತ, ಅಸ್ಪಷ್ಟ; ಬೆಳ್ವೊಲ ಹಾಗೂ ಅಗ್ರಹಾರ ಬೆಣತೂರಗಳ ಉಲ್ಲೇಖ.
೧೦೪೯	SII XI-i 81	ಎರಡರುನೂರರ ಪೆರ್ಗಡೆಯ ಮಗ ಮಾದಿರಾಜನು ಗೋಗ್ರಹಣದಲ್ಲಿ ಆಕಳುಗಳನ್ನು ರಕ್ಷಿಸಿದ ಉಲ್ಲೇಖ.
೧೨೦೦	SII XV 215	ಸ್ವಯಂಭೂದೇವರಿಗೆ ಸುವರ್ಣದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೧೦೩	ಬೆಂತೂರ	೧೯೨೬-೨೭	೧೫೫	ಶಂಭುಲಿಂಗ ದೇವಾಲಯ-ಕಂಬ ಮತ್ತೊಂದು ಕಂಬ	ಹೊ; ಬಲ್ಲಾಳ II
	೧೦೪	ಬೆಂತೂರ	೧೯೨೬-೨೭	೧೫೪	ಶಂಭುಲಿಂಗ ದೇವಾಲಯ-ಕಂಬ ಮತ್ತೊಂದು ಕಂಬ	ಯಾ; ಸಿಂಘಣ
	೧೦೫	ಬೆಂತೂರ	೧೯೩೪-೩೫	೬೮	ಹನುಮಂತ ದೇವರಗುಡಿ ಎದುರು	–
	೧೦೬	ಬೆಂತೂರ	೧೯೨೬-೨೭	೧೫೬	ಶಂಭುಲಿಂಗ ದೇವಾಲಯ ಮತ್ತೊಂದು ಕಂಬ	–
೧೮	೧೦೭	ಬೆಲಹೋಡ	೧೯೨೬-೨೭	೧೪೮	ಈಶ್ವರ ಗುಡಿ-ಎದುರು	ರಾ; ಜಗತ್ತುಂಗ
	೧೦೮	ಬೆಲಹೋಡ	೧೯೨೬-೨೭	೧೪೬	ಅದೇಕಲ್ಲು	ಕಲ; ಸೋವಿದೇವ
	೧೦೯	ಬೆಲಹೋಡ	೧೯೨೬-೨೭	೧೪೭	ಅದೇಕಲ್ಲು	ಕಲ; ಸಂಕಮ
೧೯	೧೧೦	ಮಲ್ಲಸಮುದ್ರ	೧೯೨೬-೨೭	೧೫೮	ಈಶ್ವರ ಗುಡಿ ಎದುರು	ಕ.ಚಾ; ತೈಲ III
೨೦	೧೧೧	ಮುಳಗುಂದ	೧೯೨೬-೨೭	೮೯	ನಾರಾಯಣದೇವರ ಗುಡಿ ಧ್ವಜಸ್ತಂಭ	–
೨೦	೧೧೨	ಮುಳಗುಂದ	–	–	ಜಿನಾಲಯ ಗೋಡೆ	ರಾ; ಕೃಷ್ಣ II

ಮಿತಿ	ಪ್ರಕಟನೆ	ವಿಷಯ
೧೨೦೫	SII XV 218	ಸೋಮಯ್ಯನಿಂದ ಸ್ವಯಂಭೂದೇವರಿಗೆ ಸುವರ್ಣದಾನ.
೧೨೧೪	SII XV 161	ಹಿರಿಯಕೆರೆಗೆ ಬಿಟ್ಟ ಭೂದಾನ.
೧೫೧೧	–	ಅತಿತ್ರುಟಿತ, ಬೆನತೂರದ ಸೋಮನಾಥಭಟ್ಟನಿಗೆ ನೀಡಿದ ಭೂದಾನ.
–	–	ವೈಜಕಬ್ಬೆಯು ನಿರ್ಮಿಸಿದ ಕಂಬದ ಉಲ್ಲೇಖ.
-	SII XI-i 6 KI V 2	ಗೋಸಹಸ್ರದಾನದ ಉಲ್ಲೇಖ.
೧೧೭೪	SII XV 124 KI V 37	ಮೂಲಸ್ಥಾನ ದೇವಾಲಯದ ಆದಿತ್ಯದೇವನಿಗೆ ರಾಯಸನಿಂದ ಭೂಮಿ ಹಾಗೂ ಸುವರ್ಣದಾನ.
೧೧೭೮	SII XV 132 KI V 39	ದಂಡನಾಯಕ ಧನ್ನುಗಿ ದೇವಾದಿಗಳಿಂದ ಬೆಳಹೊಡೆಯ ದೇವಿಂಗೆರೆಗೆ ದಾನ.
೧೧೫೭	SII XV 54	ತ್ರುಟಿತ, ಮೂಲಸ್ಥಾನದೇವರಿಗೆ ಬಿಟ್ಟ ಭೂದಾನ.
೫೭೭	SII XI-ii 516	ಮೂಲಸ್ತಂಭದ ಸ್ಥಾಪನೆ.
೯೦೨–೩	EI XIII p 192-94	ಜೀಕಾರ್ಯನಿಂದ ಮುಳಗುಂದದಲ್ಲಿ ಬಸದಿಯ ನಿರ್ಮಾಣ ಹಾಗೂ ಆತನ ಮಗ ಅರಪಾರ್ಯನಿಂದ ಭೂದಾನ.

ಗ್ರಾಮ. ನಂ.	ಶಾಸನ ನಂ.	ಗ್ರಾಮದ ಹೆಸರು	ವರದಿ-ವರ್ಷ	ನಂ.	ದೊರೆತ ಸ್ಥಳ	ಅರಸ
	೧೧೩	ಮುಳಗುಂದ	–	–	ರಾಮದೇವರ ಗುಡಿ	ಗಂಗ; ಪಾಂಚಲದೇವ
	೧೧೪	ಮುಳಗುಂದ	೧೯೨೬-೨೭	೯೭	ಕೆರೆಯ ಏರಿ	–
	೧೧೫	ಮುಳಗುಂದ	೧೯೨೬-೨೭	೧೦೦	ಬೆಂಕಿಯವರಹೊಲ	ಕ.ಚಾ; ಜಯಸಿಂಹ II
	೧೧೬	ಮುಳಗುಂದ	–	–	ಜೈನ ಬಸದಿ	ಕ.ಚಾ; ಸೋಮೇಶ್ವರ I
	೧೧೭	ಮುಳಗುಂದ	೧೯೨೬-೨೭	೮೪	ನಗರೇಶ್ವರ ಗುಡಿ-ಹಿಂದೆ	ಕ.ಚಾ; ಸೋಮೇಶ್ವರ I
	೧೧೮	ಮುಳಗುಂದ	೧೯೨೬-೨೭	೮೮	ನಾರಾಯಣದೇವರ ಗುಡಿ-ಧ್ವಜಸ್ತಂಭ	ಕ.ಚಾ; ವಿಕ್ರಮಾದಿತ್ಯ VI
